# 2025ರ ಕರ್ನಾಟಕ ಅಧಿನಿಯಮ ಸಂಖ್ಯೆ:72

# ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧಿನಿಯಮ, 2025

## ಪ್ರಕರಣಗಳ ಪಟ್ಟಿ

**ಪ್ರಕರಣಗಳು**


1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು
3. ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಮಂಡಳಿಯ ರಚನೆ
4. ಮಂಡಳಿಯ ಸಂರಚನೆ
5. ಮಂಡಳಿಯ ಸಭೆಗಳು
6. ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು
7. ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಹಕ್ಕುಗಳು
8. ಮಂಡಳಿಯ ಅಧಿಕಾರಿಗಳು ಮತ್ತು ನೌಕರರು
9. ಲೆಕ್ಕ ಪತ್ರ ಮತ್ತು ಲೆಕ್ಕಪರಿಶೋಧನೆ
10. ಗಿಗ್ ಕಾರ್ಮಿಕರ ನೋಂದಣಿ
11. ಸಂಗ್ರಹಕಾರರ ಅಥವಾ ವೇದಿಕೆಗಳ ನೋಂದಣಿ
12. ನ್ಯಾಯೋಚಿತ ಒಪ್ಪಂದಗಳನ್ನು ಮಾಡಿಕೊಳ್ಳುವ ಹೊಣೆಗಾರಿಕೆ
13. ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಗಳ ಸಂಬಂಧದಲ್ಲಿನ ಪಾರದರ್ಶಕತೆ
14. ಕೆಲಸವನ್ನು ಕೊನೆಗೊಳಿಸುವಿಕೆ
15. ಆದಾಯ ಭದ್ರತೆ
16. ಯುಕ್ತ ಕೆಲಸದ ಸ್ಥಿತಿಗತಿಗಳು
17. ಹೊಣೆಗಾರಿಕೆಗಳ ಬಹಿರಂಗಪಡಿಸುವಿಕೆ
18. ವಿಚಾರಣೆಗಳಿಗಾಗಿ ಸಂಪರ್ಕ ಕೇಂದ್ರದ ನಾಮನಿರ್ದೇಶನ
19. ಗಿಗ್ ಕಾರ್ಮಿಕರಿಗಾಗಿ ನಿಧಿ
20. ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕ
21. ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆ
22. ಕುಂದುಕೊರತೆಗಳ ನಿವಾರಣೆ
23. ಬಡ್ಡಿ ಮತ್ತು ದಂಡಗಳು
24. ತ್ರೈಮಾಸಿಕ ವಿವರಪಟ್ಟಿಕೆಗಳ ಸಲ್ಲಿಕೆ
25. ವಾರ್ಷಿಕ ವರದಿ
26. ಯಾವುದೇ ಇತರ ಕಾನೂನಿಗೆ ಅಧಿನಿಯಮವು ಹೆಚ್ಚುವರಿಯಾಗಿರುವುದು

27. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
28. ನಿಯಮಗಳ ರಚನಾಧಿಕಾರ
29. ವಿನಿಯಮಗಳ ರಚನಾಧಿಕಾರ
30. ತೊಂದರೆಗಳನ್ನು ನಿವಾರಿಸುವ ಅಧಿಕಾರ
31. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ
32. ನಿರಸನ ಮತ್ತು ಉಳಿಸುವಿಕೆಗಳು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2025ರ ಅಧಿನಿಯಮ ಸಂಖ್ಯೆ: 72** ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು, ಸಾಮಾಜಿಕ ಭದ್ರತೆ, ವೃತ್ತಿ ಜನ್ಯ ಆರೋಗ್ಯ ಮತ್ತು ಸುರಕ್ಷತೆಯ ಸಂಬಂಧದಲ್ಲಿ ಸಂಗ್ರಹಕಾರರ ಮೇಲೆ ಹೊಣೆಗಾರಿಕೆಯನ್ನು ವಹಿಸಲು, ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವುದು, ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) ವಿವಾದ ಪರಿಹಾರ ವ್ಯವಸ್ಥೆಗಳನ್ನು ಉಪಬಂಧಿಸುವುದು;

(ii) ಕ್ಷೇಮಾಭಿವೃದ್ಧಿ ಮಂಡಳಿಯನ್ನು ರಚಿಸುವುದು;

(iii) ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ಕ್ಷೇಮಾಭಿವೃದ್ಧಿಯ ನಿಧಿಯನ್ನು ಸ್ಥಾಪಿಸುವುದು;

(iv) ವೇದಿಕೆ ಆಧಾರಿತ ಗಿಗ್ ಕಾರ್ಮಿಕರು ಮಂಡಳಿಯಲ್ಲಿ ನೋಂದಾಯಿಸಲು ಉಪಬಂಧಿಸುವುದು;

(v) ಸಂಗ್ರಹಕಾರರು ಅಥವಾ ವೇದಿಕೆ ನೋಂದಣಿ ಮಾಡಿಸಲು ಉಪಬಂಧಿಸುವುದು; ಮತ್ತು

(vi) ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ಆದಾಯ ಭದ್ರತೆ ಮತ್ತು ಸೂಕ್ತ ಕೆಲಸದ ಪರಿಸ್ಥಿತಿಗಳನ್ನು ಉಪಬಂಧಿಸುವುದು.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಈ ಅಧಿನಿಯಮವನ್ನು ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧ್ಯಾದೇಶ, 2025ನ್ನು (2025ರ ಕರ್ನಾಟಕ ಅಧ್ಯಾದೇಶ ಸಂ. 04) ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2025ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:31, ಕಡತ ಸಂಖ್ಯೆ:ಸಂವ್ಯಶಾಇ 37 ಶಾಸನ 2024]
[ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 23 ಮತ್ತು 24ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:584, ದಿನಾಂಕ:12.09.2025ರಲ್ಲಿ ಪ್ರಕಟಗೊಂಡಿದೆ]

## 2025ರ ಕರ್ನಾಟಕ ಅಧಿನಿಯಮ ಸಂಖ್ಯೆ:72

(2025 ರ ಸೆಪ್ಟೆಂಬರ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧಿನಿಯಮ, 2025

(2025 ರ ಸೆಪ್ಟೆಂಬರ್ ತಿಂಗಳ 11ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು, ಸಾಮಾಜಿಕ ಭದ್ರತೆ, ವೃತ್ತಿಜನ್ಯ ಆರೋಗ್ಯ ಮತ್ತು ಸುರಕ್ಷತೆ, ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಗಳಲ್ಲಿನ ಪಾರದರ್ಶಕತೆಯ ಸಂಬಂಧದಲ್ಲಿ ಸಂಗ್ರಹಕಾರರ ಅಥವಾ ವೇದಿಕೆಗಳ ಮೇಲೆ ಹೊಣೆಗಾರಿಕೆಯನ್ನು ನೀಡಲು, ವಿವಾದ ಪರಿಹಾರ ಕಾರ್ಯವ್ಯವಸ್ಥೆಗಳನ್ನು ಉಪಬಂಧಿಸಲು, ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗಾಗಿ ಕ್ಷೇಮಾಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು ಮತ್ತು ಕ್ಷೇಮಾಭಿವೃದ್ಧಿ ನಿಧಿಯನ್ನು ಸೃಜಿಸಲು, ರಾಜ್ಯದಲ್ಲಿನ ವೇದಿಕೆ ಆಧಾರಿತ ಗಿಗ್ ಕಾರ್ಮಿಕರನ್ನು ಮತ್ತು ಸಂಗ್ರಹಕಾರರನ್ನು ಅಥವಾ ವೇದಿಕೆಗಳನ್ನು ನೋಂದಾಯಿಸಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಲು, ಸಾಮಾಜಿಕ ಭದ್ರತೆ, ವೃತ್ತಿಜನ್ಯ ಆರೋಗ್ಯ ಮತ್ತು ಸುರಕ್ಷತೆ, ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಗಳಲ್ಲಿನ ಪಾರದರ್ಶಕತೆಯ ಸಂಬಂಧದಲ್ಲಿ ಸಂಗ್ರಹಕಾರರ ಅಥವಾ ವೇದಿಕೆಗಳ ಮೇಲೆ ಹೊಣೆಗಾರಿಕೆಯನ್ನು ನೀಡಲು, ವಿವಾದ ಪರಿಹಾರ ಕಾರ್ಯವ್ಯವಸ್ಥೆಗಳನ್ನು ಉಪಬಂಧಿಸಲು, ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗಾಗಿ ಕ್ಷೇಮಾಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು ಮತ್ತು ಕ್ಷೇಮಾಭಿವೃದ್ಧಿ ನಿಧಿಯನ್ನು ಸೃಜಿಸಲು, ರಾಜ್ಯದಲ್ಲಿನ ವೇದಿಕೆ ಆಧಾರಿತ ಗಿಗ್ ಕಾರ್ಮಿಕರನ್ನು ಮತ್ತು ಸಂಗ್ರಹಕಾರರನ್ನು ಅಥವಾ ವೇದಿಕೆಗಳನ್ನು ನೋಂದಾಯಿಸಲು ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1.ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.-** (1) ಈ ಅಧಿನಿಯಮವನ್ನು ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳು 2025ರ ಮೇ 30ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು;

(3) ಇದು,-

(i) ಕರ್ನಾಟಕ ರಾಜ್ಯದೊಳಗೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಒಂದು ಅಥವಾ ಹೆಚ್ಚಿನ ಸೇವೆಗಳನ್ನು ನಿರ್ವಹಿಸುವ ಅಥವಾ ಒದಗಿಸುವ ಪ್ರತಿಯೊಬ್ಬ ಸಂಗ್ರಹಕಾರರಿಗೆ ಅಥವಾ ವೇದಿಕೆಗಳಿಗೆ ಮತ್ತು ಕಾಲಕಾಲಕ್ಕೆ ಸರ್ಕಾರದಿಂದ ತಿದ್ದುಪಡಿಗೊಂಡಂತೆ;

(ii) 2ನೇ ಪ್ರಕರಣದ (ಜಿ) ಖಂಡದಡಿ ಪರಿಭಾಷಿಸಿದಂತೆ ಪ್ರತಿಯೊಂದು ವೇದಿಕೆಗೆ; ಮತ್ತು

(iii)10ನೇ ಪ್ರಕರಣದಡಿ ಮಂಡಳಿಯೊಂದಿಗೆ ನೋಂದಣಿಯಾದ ಪ್ರತಿಯೊಬ್ಬ ಗಿಗ್ ಕಾರ್ಮಿಕನಿಗೆ,

-ಅನ್ವಯಿಸುತ್ತದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಗಳು" ಎಂದರೆ, ಮಾನವನ ಹಸ್ತಕ್ಷೇಪದೊಂದಿಗೆ ಅಥವಾ ಮಾನವನ ಹಸ್ತಕ್ಷೇಪವಿಲ್ಲದೆ ಸ್ವಯಂಚಾಲಿತ ವಿಧಾನಗಳ ಮೂಲಕ ತೀರ್ಮಾನಗಳನ್ನು ಕೈಗೊಳ್ಳುವ ವ್ಯವಸ್ಥೆಗಳು;

(ಬಿ) "ಸಂಗ್ರಹಕಾರ" ಎಂದರೆ, ಮಾರಾಟಗಾರ ಅಥವಾ ಸೇವೆಯನ್ನು ಒದಗಿಸುವವರೊಂದಿಗೆ ಸರಕುಗಳನ್ನು ಕೊಳ್ಳುವವರು ಅಥವಾ ಸೇವೆಯನ್ನು ಬಳಸಿಕೊಳ್ಳುವವರನ್ನು ಸಂಪರ್ಕಿಸಲು ಇರುವ ಡಿಜಿಟಲ್ ಮಧ್ಯಸ್ಥಿಕೆ ಹಾಗೂ ಸೇವೆಗಳನ್ನು ಒದಗಿಸುವುದಕ್ಕಾಗಿ ಒಂದು ಅಥವಾ ಹೆಚ್ಚಿನ ಸಂಗ್ರಹಕಾರರೊಂದಿಗೆ ಸಮನ್ವಯಗೊಳಿಸುವ ಯಾವುದೇ ಘಟಕವನ್ನು ಒಳಗೊಳ್ಳುವುದು;

(ಸಿ) "ಮಂಡಳಿ" ಎಂದರೆ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಿದ ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಮಂಡಳಿ;

(ಡಿ) "ನಿಧಿ" ಎಂದರೆ, 19ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ನಿಧಿ;

(ಇ) "ಗಿಗ್ ಕಾರ್ಮಿಕ" ಎಂದರೆ, ಪಾವತಿಯ ದರದಲ್ಲಿ ನೀಡಲಾಗುವ ಕಾರ್ಯವ್ಯವಸ್ಥೆಯಲ್ಲಿ ಕೆಲಸವನ್ನು ನಿರ್ವಹಿಸುವ ಅಥವಾ ಪಾಲ್ಗೊಳ್ಳುವ, ಅಂಥ ಒಪ್ಪಂದದಲ್ಲಿ ಹೇಳಲಾದ ನಿಬಂಧನೆಗಳು ಮತ್ತು ಷರತ್ತುಗಳ ಆಧಾರದ ಮೇಲೆ ಮತ್ತು ಎಲ್ಲಾ ತುಂಡು ದರಗಳ ಕೆಲಸಗಳನ್ನು ಒಳಗೊಳ್ಳುವ ಹಾಗೂ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸೇವೆಗಳನ್ನು ವೇದಿಕೆಯೊಂದರ ಮೂಲಕ ನಿಯೋಜಿಸಲಾದ ಕೆಲಸವನ್ನು ನಿರ್ವಹಿಸುವ ವ್ಯಕ್ತಿ;

(ಎಫ್) "ಪಾವತಿ ನೀಡಿಕೆ" (payout) ಎಂದರೆ, ವೇದಿಕೆಯಲ್ಲಿ ಯಾವುದೇ ಕಾರ್ಯನಿರ್ವಹಿಸಿದ್ದಕ್ಕೆ ಅಥವಾ ಸೇವೆ ಸಲ್ಲಿಸಿದ್ದಕ್ಕೆ ಸಂಗ್ರಹಕಾರ ಅಥವಾ ವೇದಿಕೆಯು ಗಿಗ್ ಕಾರ್ಮಿಕನಿಗೆ ಮಾಡಿದ ಯಾವುವೇ ಅಂತಿಮ ಸಂದಾಯಗಳು;

(ಜಿ) "ವೇದಿಕೆ" ಎಂದರೆ, ಸೇವೆಯನ್ನು ಸ್ವೀಕರಿಸುವವರ ಕೋರಿಕೆಯ ಮೇರೆಗೆ, ಪಾವತಿಯ ಉದ್ದೇಶಕ್ಕಾಗಿ ಕೆಲವು ಸ್ಥಳದಲ್ಲಿನ ವ್ಯಕ್ತಿಗಳ ಮೂಲಕ ಕೆಲಸವನ್ನು ನಿರ್ವಹಿಸುವ ಸಂಸ್ಥೆಯನ್ನು ಒಳಗೊಳ್ಳುವ ಹಾಗೂ ದತ್ತಾಂಶದ ಮೇಲೆ ಅವಲಂಬಿತವಾಗಿರುವ ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಗಳ ಬಳಕೆಯನ್ನು ಅಥವಾ ಮಾನವ ನಿರ್ಧರಣೆಯನ್ನು ಒಳಗೊಳ್ಳುವ ವಿದ್ಯುನ್ಮಾನ ವಿಧಾನಗಳ ಮೂಲಕ ಸೇವೆಯನ್ನು ಒದಗಿಸುವ ಯಾವುದೇ ವ್ಯವಸ್ಥೆ;

(ಎಚ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ನಿಯಮಗಳ ಮೂಲಕ ನಿಯಮಿಸಲಾದುದು;

(ಐ) "ವಿನಿಯಮಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಮಂಡಳಿಯ ಮೂಲಕ ರಚಿಸಲಾದ ವಿನಿಯಮಗಳು;

(ಜೆ) "ಅನುಸೂಚಿ" ಎಂದರೆ ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

(ಕೆ) "ಸಾಮಾಜಿಕ ಭದ್ರತೆ" ಎಂದರೆ, ಗಿಗ್ ಕಾರ್ಮಿಕರು ಮತ್ತು ವೇದಿಕೆ ಕಾರ್ಮಿಕರಿಗೆ ವಿಶೇಷವಾಗಿ ವಯಸ್ಸಾದ, ನಿರುದ್ಯೋಗದ, ಅನಾರೋಗ್ಯದ, ಅಸಾಮರ್ಥ್ಯದ, ಕೆಲಸದಿಂದ ಗಾಯಗೊಂಡ, ಪ್ರಸೂತಿಯಾದ ಅಥವಾ ಅವರುಗಳ ಮೇಲೆ ಪ್ರದತ್ತವಾದ ಹಕ್ಕುಗಳಿಂದಾಗಿ ಅನ್ನ-ಸಂಪಾದನೆಯು (breadwinner) ನಷ್ಟವಾದ ಸಂದರ್ಭಗಳಲ್ಲಿ ಆರೋಗ್ಯ ರಕ್ಷಣೆಯ ಮಾರ್ಗವನ್ನು ಖಚಿತಪಡಿಸಿಕೊಳ್ಳಲು ಮತ್ತು ಆದಾಯ ಭದ್ರತೆಯನ್ನು ಒದಗಿಸಲು ನೀಡಲಾಗಿರುವ ರಕ್ಷಣಾ ಕ್ರಮಗಳು ಹಾಗೂ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಸ್ಕೀಮುಗಳು;

(ಎಲ್) "ವಿಶಿಷ್ಟ ಐಡಿ" ಎಂದರೆ 10ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ನೋಂದಾಯಿಸಲಾದ ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ನೀಡಲಾದ ವಿಶಿಷ್ಟ ಗುರುತಿನ ಸಂಖ್ಯೆ;

(ಎಂ) "ಕ್ಷೇಮಾಭಿವೃದ್ಧಿ ಶುಲ್ಕ" ಎಂದರೆ, ಈ ಅಧಿನಿಯಮದ 20ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ವಿಧಿಸಲಾದ ಶುಲ್ಕ;

(ಎನ್) "ಅಧಿಸೂಚನೆ" ಎಂದರೆ, ರಾಜ್ಯದ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಮತ್ತು ಸಂದರ್ಭಾನುಸಾರವಾಗಿ, "ಅಧಿಸೂಚಿಸುವುದು" ಎಂಬ ಪದಾವಳಿಯನ್ನು ಅದರ ವ್ಯಾಕರಣ ವ್ಯತ್ಯಾಸಗಳು ಹಾಗೂ ತದನುಸಾರವಾಗಿ ಸಜಾತೀಯ ಪದಾವಳಿಗಳೊಂದಿಗೆ ಅರ್ಥೈಸತಕ್ಕದ್ದು; ಮತ್ತು

(ಒ) "ಕೊನೆಗೊಳಿಸುವುದು" ಅಥವಾ "ಕೊನೆಗೊಳಿಸುವಿಕೆ" ಎಂದರೆ, ವೇದಿಕೆ ಆಧಾರಿತ ಗಿಗ್ ಕಾರ್ಮಿಕನನ್ನು ಡಿಜಿಟಲ್ ವೇದಿಕೆಗೆ ಪ್ರವೇಶಿಸುವುದನ್ನು ವಾಸ್ತವಿಕವಾಗಿ ನಿರ್ಬಂಧಿಸುವುದು, ಅಂಥ ಕಾರ್ಮಿಕರ ಡಿಜಿಟಲ್ ವೇದಿಕೆಯ ಪ್ರವೇಶವನ್ನು ತಡೆಗಟ್ಟುವುದನ್ನೂ ಒಳಗೊಂಡು, ವೇದಿಕೆ ಆಧಾರಿತ ಗಿಗ್ ಕಾರ್ಮಿಕನನ್ನು ಅಮಾನತ್ತುಗೊಳಿಸುವುದು ಅಥವಾ ವೇದಿಕೆ ಆಧಾರಿತ ಗಿಗ್ ಕಾರ್ಮಿಕನನ್ನು ಡಿಜಿಟಲ್ ವೇದಿಕೆಯಲ್ಲಿ ಸೇವೆಗಳನ್ನು ಒದಗಿಸಲು ಅನರ್ಹನನ್ನಾಗಿ ಮಾಡುವುದು.

**3. ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಮಂಡಳಿಯ ರಚನೆ.-** (1) ರಾಜ್ಯ ಸರ್ಕಾರವು, ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಮಂಡಳಿ ಎಂದು ಕರೆಯಲಾಗುವ ಒಂದು ಮಂಡಳಿಯನ್ನು ಈ ಅಧಿನಿಯಮದ ಅಡಿಯಲ್ಲಿ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಲಾದ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಈ ಕುರಿತು ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಸ್ಥಾಪಿಸತಕ್ಕದ್ದು.

(2) ಮಂಡಳಿಯು ಅಗತ್ಯವಿರುವಾಗಲೆಲ್ಲ ಅನುಷ್ಠಾನಗೊಳಿಸತಕ್ಕ ಸಾಮಾನ್ಯ ಅಥವಾ ವಲಯ ನಿರ್ದಿಷ್ಟ ಸಾಮಾಜಿಕ ಭದ್ರತೆ ಮತ್ತು ಇತರೆ ಪ್ರಯೋಜನಗಳನ್ನು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಅಧಿಸೂಚಿಸತಕ್ಕದ್ದು.

(3) ಮಂಡಳಿಯ ಕೇಂದ್ರ ಕಾರ್ಯಸ್ಥಾನವು ಬೆಂಗಳೂರಿನಲ್ಲಿ ಇರತಕ್ಕದ್ದು.

(4) ಮಂಡಳಿಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಸ್ವತ್ತುಗಳನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ

ಅಧಿಕಾರವನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

**4. ಮಂಡಳಿಯ ಸಂರಚನೆ.-** ಮಂಡಳಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ಪ್ರಭಾರೆಯಲ್ಲಿರುವ ಮಂತ್ರಿಗಳು, | ಪದನಿಮಿತ್ತ ಅಧ್ಯಕ್ಷರು; |
| (ಬಿ) | ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಅಥವಾ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಆತನ ನಾಮನಿರ್ದೇಶಿತ. | ಪದನಿಮಿತ್ತ ಸದಸ್ಯ; |
| (ಸಿ) | ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ ಅಥವಾ ಕರ್ನಾಟಕ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಆತನ ನಾಮನಿರ್ದೇಶಿತ. | ಪದನಿಮಿತ್ತ ಸದಸ್ಯ; |
| (ಡಿ) | ಆಯುಕ್ತರು, ವಾಣಿಜ್ಯ ತೆರಿಗೆಗಳ ಇಲಾಖೆ ಅಥವಾ ಜಂಟಿ ಆಯುಕ್ತರ ದರ್ಜೆಗೆ ಕಡಿಮೆಯಲ್ಲದ ಆತನ ನಾಮನಿರ್ದೇಶಿತ. | ಪದನಿಮಿತ್ತ ಸದಸ್ಯ; |
| (ಇ) | ರಾಜ್ಯ ಸರ್ಕಾರವು ನೇಮಿಸಿದ ಮಂಡಳಿಯ ದೈನಂದಿನ ಕಾರ್ಯನಿರ್ವಹಣೆಯ ನಿರ್ವಹಣಾ ಪ್ರಭಾರೆಯಲ್ಲಿರುವ ಮತ್ತು ಮಂಡಳಿಯ ಪರವಾಗಿ ಕರ್ತವ್ಯಗಳನ್ನು ನೆರವೇರಿಸುವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | ಪದನಿಮಿತ್ತ ಸದಸ್ಯ ಕಾರ್ಯದರ್ಶಿ ; |
| (ಎಫ್) | ರಾಜ್ಯ ಸರ್ಕಾರವು ನಾಮನಿರ್ದೇಶಿಸುವ ಗಿಗ್ ಕಾರ್ಮಿಕರ ನಾಲ್ವರು ಪ್ರತಿನಿಧಿಗಳು | ಸದಸ್ಯರು; |
| (ಜಿ) | ರಾಜ್ಯ ಸರ್ಕಾರವು ನಾಮನಿರ್ದೇಶಿಸುವ ಸಂಗ್ರಹಕಾರರ ಅಥವಾ ವೇದಿಕೆಯ ನಾಲ್ವರು ಪ್ರತಿನಿಧಿಗಳು | ಸದಸ್ಯರು; |
| (ಎಚ್) | ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಗಿಗ್ ಆರ್ಥಿಕತೆಯ ಕ್ಷೇತ್ರದಲ್ಲಿ ಕೆಲಸದ ಅನುಭವ ಹೊಂದಿರುವ ಅಥವಾ ಆ ಕೆಲಸಗಳ ಕ್ಷೇತ್ರದಲ್ಲಿ ವಿಷಯ ತಜ್ಞರಾಗಿರುವ ನಾಗರಿಕ ಸಮಾಜದ ಇಬ್ಬರು ಪ್ರತಿನಿಧಿಗಳು | ಸದಸ್ಯರು; ಮತ್ತು |
| (ಐ) | ಅಗತ್ಯ ಸಲಹೆಗಳನ್ನು ನೀಡಲು ದತ್ತಾಂಶ ಸಂಗ್ರಹ ಮತ್ತು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳ ಕ್ಷೇತ್ರದಲ್ಲಿನ ಒಬ್ಬ ತಾಂತ್ರಿಕ ನಿಪುಣ. | ವಿಶೇಷ ಆಹ್ವಾನಿತ |

(2) ಮಂಡಳಿಯ ನಾಮನಿರ್ದೇಶಿತ ಸದಸ್ಯರು ಮೂರು ವರ್ಷಗಳ ಪದಾವಧಿಯನ್ನು ಹೊಂದಿರತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ತಾನು ಯುಕ್ತವೆಂದು ಭಾವಿಸಿದಲ್ಲಿ ಅವರ ಪದಾವಧಿಯನ್ನು ಮತ್ತೊಂದು ವರ್ಷಕ್ಕೆ ವಿಸ್ತರಿಸಬಹುದು.

(3) ಉಪಪ್ರಕರಣ (1)ರ (ಎಫ್), (ಜಿ) ಮತ್ತು (ಎಚ್) ಖಂಡಗಳ ಅಡಿಯಲ್ಲಿ ನಾಮನಿರ್ದೇಶಿತರಾದ ಸದಸ್ಯರ ಪೈಕಿ ಕನಿಷ್ಠ ಒಬ್ಬರು ಮಹಿಳಾ ಪ್ರತಿನಿಧಿ ಇರತಕ್ಕದ್ದು.

(4) ಮರಣ, ರಾಜೀನಾಮೆ, ಅನರ್ಹತೆ ಅಥವಾ (5)ನೇ ಉಪಪ್ರಕರಣದಡಿಯಲ್ಲಿ ತೆಗೆದು ಹಾಕುವುದರಿಂದಾಗಿ ಉದ್ಭವಿಸುವ ಯಾವುದೇ ಖಾಲಿ ಸ್ಥಾನಕ್ಕೆ ಸಂಬಂಧಿಸಿದಂತೆ, ಉಳಿದ ಪದಾವಧಿಗಾಗಿ ಸರ್ಕಾರವು ಹೊಸದಾಗಿ ನಾಮನಿರ್ದೇಶನ ಮಾಡುವ ಮೂಲಕ ಅಂಥ ಖಾಲಿ ಸ್ಥಾನವನ್ನು ತುಂಬತಕ್ಕದ್ದು.

(5) ಮಂಡಳಿಯ ಯಾರೇ ನಾಮನಿರ್ದೇಶಿತ ಸದಸ್ಯನು ಯಾವುದೇ ಸಮಯದಲ್ಲಿ ಅಧ್ಯಕ್ಷರಿಗೆ ಸ್ವಹಸ್ತಾಕ್ಷರದ ಲಿಖಿತ ಪತ್ರದ ಮೂಲಕ ಆತನ ಹುದ್ದೆಗೆ ರಾಜಿನಾಮೆಯನ್ನು ನೀಡಬಹುದು, ಮತ್ತು ರಾಜಿನಾಮೆಯ ಅಂಗೀಕಾರದ ಮೇರೆಗೆ ಆತನ ಹುದ್ದೆಯು ತೆರವಾಗುವುದು.

(6) ಈ ಮುಂದಿನ ಯಾರೇ ವ್ಯಕ್ತಿಯು,-

(i) ಮಂಡಳಿಯ ವೇತನ ಪಡೆಯುವ ಅಧಿಕಾರಿ ಅಥವಾ ನೌಕರನಾಗಿದ್ದರೆ; ಅಥವಾ

(ii) ಯಾವುದೇ ಸಮಯದಲ್ಲಿ ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(iii) ಮತಿ ವಿಕಲನಾಗಿದ್ದರೆ ಅಥವಾ ಅಸ್ವಸ್ಥ ಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆ ಘೋಷಿತನಾಗಿದ್ದರೆ; ಅಥವಾ

(iv) ನೈತಿಕ ಅಧ:ಪತನವನ್ನು ಒಳಗೊಂಡ ಯಾವುದೇ ಆರೋಪದಲ್ಲಿ ಅಪರಾಧ ನಿರ್ಣಿತನಾಗಿದ್ದರೆ; ಅಥವಾ

(v) ಮಂಡಳಿಯ ಮೂರಕ್ಕಿಂತ ಹೆಚ್ಚಿನ ನಿರಂತರ ಸಭೆಗಳಿಗೆ ಮಂಡಳಿಯ ಅನುಮತಿಯಿಲ್ಲದೆ ಗೈರು ಹಾಜರಾಗಿದ್ದರೆ,

- ಮಂಡಳಿಯ ನಾಮನಿರ್ದೇಶಿತ ಸದಸ್ಯನಾಗಿ ಆಯ್ಕೆಯಾಗತಕ್ಕದ್ದಲ್ಲ ಅಥವಾ ಮುಂದುವರೆಯತಕ್ಕದ್ದಲ್ಲ.

(7) ಮಂಡಳಿಯ ನಾಮನಿರ್ದೇಶಿತ ಸದಸ್ಯರು ಮಂಡಳಿಯ ಸಭೆಗಳಿಗೆ ಹಾಜರಾಗುವುದಕ್ಕಾಗಿ ನಿಯಮಿಸಬಹುದಾದಂಥ ದರಗಳಲ್ಲಿ ಭತ್ಯೆಗಳಿಗೆ ಅರ್ಹರಾಗಿರತಕ್ಕದ್ದು.

**5. ಮಂಡಳಿಯ ಸಭೆಗಳು.-** (1) ಮಂಡಳಿಯು ನಿಯಮಿಸಬಹುದಾದಂಥ ಸಮಯ ಮತ್ತು ಸ್ಥಳಗಳಲ್ಲಿ ಸಭೆಯನ್ನು ಸೇರತಕ್ಕದ್ದು ಹಾಗೂ ಕಾರ್ಯಕಲಾಪಗಳ ನಿರ್ವಹಣೆಗಾಗಿ ಅಂಥ ಕಾರ್ಯವಿಧಾನದ ನಿಯಮಗಳನ್ನು ಅದರ ಸಭೆಗಳಲ್ಲಿ ಪರಿಶೀಲಿಸತಕ್ಕದ್ದು:

ಪರಂತು, ಮಂಡಳಿಯು ಕನಿಷ್ಠ ತ್ರೈಮಾಸಿಕ ಅವಧಿಗೊಮ್ಮೆ ಸಭೆ ಸೇರತಕ್ಕದ್ದು:

ಮತ್ತು ಪರಂತು, ಮಂಡಳಿಯ ನಾಲ್ಕನೇ ಒಂದರಷ್ಟು ಸದಸ್ಯರ ಲಿಖಿತ ಮನವಿಯ ಮೇರೆಗೆ ಅಧ್ಯಕ್ಷನು ತ್ರೈಮಾಸಿಕ ಅವಧಿಗೊಮ್ಮೆ ಸಭೆಯನ್ನು ಕರೆಯಬಹುದು.

(2) ಅಧ್ಯಕ್ಷನು ಮಂಡಳಿಯ ಯಾವುದೇ ಸಭೆಗೆ ಯಾವುದೇ ಕಾರಣಕ್ಕಾಗಿ ಆತನಿಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಹಾಜರಿರುವ ಸದಸ್ಯರು ನಿರ್ಧರಿಸಿದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಮಂಡಳಿಯ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತ ಹಾಕುವ ಸದಸ್ಯರ ಬಹುಮತದ ಮೂಲಕ ನಿರ್ಧರಿಸತಕ್ಕದ್ದು ಹಾಗೂ ಮತಗಳು ಸಮಾನವಾಗಿರುವ ಸಂದರ್ಭದಲ್ಲಿ, ಅಧ್ಯಕ್ಷ ಅಥವಾ ಆತನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿರುವ ಸದಸ್ಯನು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಆ ಮತವನ್ನು ಚಲಾಯಿಸತಕ್ಕದ್ದು.

(4) ಮಂಡಳಿಯ ಸಭೆಗೆ ಒಟ್ಟು ಸದಸ್ಯರ ಶೇಕಡ ಐವತ್ತರಷ್ಟು ಕೋರಂ ಆಗಿರತಕ್ಕದ್ದು.

**6. ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.-** ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಈ ಮುಂದಿನಂತಿರತಕ್ಕದ್ದು, ಎಂದರೆ:-

(i) ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಗಿಗ್ ಕಾರ್ಮಿಕರ ನೋಂದಣಿಯನ್ನು ಖಚಿತಪಡಿಸಿಕೊಳ್ಳುವುದು;

(ii) ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಗ್ರಹಕಾರರ ಅಥವಾ ವೇದಿಕೆಗಳ ನೋಂದಣಿಯನ್ನು ಖಾತ್ರಿಪಡಿಸುವುದು;

(iii) ಯುಕ್ತವಾಗಿ ಸಂಗ್ರಹಿಸಲಾದ ಕ್ಷೇಮಾಭಿವೃದ್ಧಿ ಶುಲ್ಕವನ್ನು ಪ್ರಮಾಣೀಕರಿಸಲು ಮೇಲ್ವಿಚಾರಣಾ ವ್ಯವಸ್ಥೆಯನ್ನು ರಚಿಸುವುದು;

(iv) ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ದೇಣಿಗೆ ನೀಡಿಕೆ ಆಧಾರದ ಮೇಲಿನ ಸಾಮಾನ್ಯ ಮತ್ತು ನಿರ್ದಿಷ್ಟ ಸಾಮಾಜಿಕ ಭದ್ರತಾ ಸ್ಕೀಮುಗಳ ಅನುಷ್ಠಾನವನ್ನು ಹಾಗೂ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ವಿಶಿಷ್ಟ ಗುರುತಿನ ಸಂಖ್ಯೆಗೆ ಜೋಡಿಸಲಾದ ವ್ಯಕ್ತಿಗತ ಸಾಮಾಜಿಕ ಭದ್ರತಾ ಖಾತೆಗಳ ಮುಖಾಂತರ ಸಾಮಾಜಿಕ ಭದ್ರತಾ ಪ್ರಯೋಜನಗಳ ವಿತರಣೆಯನ್ನು ಖಚಿತಪಡಿಸಿಕೊಳ್ಳುವುದು;

(v) ನೋಂದಾಯಿತ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿನ ಸ್ಕೀಮುಗಳ ಮೇಲ್ವಿಚಾರಣೆ ನಡೆಸುವುದು ಮತ್ತು ಅಂಥ ಸ್ಕೀಮುಗಳ ನಿರ್ವಹಣೆಗಾಗಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡುವುದು;

(vi) ರಾಜ್ಯ ಸರ್ಕಾರವು ರೂಪಿಸಿದ ಸ್ಕೀಮುಗಳ ಅನುಸಾರವಾಗಿ ಪ್ರಯೋಜನಗಳನ್ನು ಗಿಗ್ ಕಾರ್ಮಿಕರು ಪಡೆಯುತ್ತಿರುವುದನ್ನು ಮತ್ತು ಅವರು ತೊಡಗಿಸಿಕೊಂಡಿರುವ ಸಂಬಂಧಪಟ್ಟ ಸಂಗ್ರಹಕಾರರು/ವೇದಿಕೆಯಿಂದ ಅವರಿಗೆ ಪೂರ್ವಭಾವಿ ಪ್ರಯೋಜನಗಳು ಒದಗುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು; ಹಾಗೂ ಸಂಗ್ರಹಕಾರರು ಅಥವಾ ವೇದಿಕೆಗಳು ವಿಸ್ತರಿಸಿರುವ

ಸಾಮಾಜಿಕ ಭದ್ರತಾ ಸ್ಕೀಮುಗಳನ್ನು ಸಹ ಪರಿಶೀಲಿಸುವುದು ಮತ್ತು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು;

(vii) ಗಿಗ್ ಕಾರ್ಮಿಕರಿಗಾಗಿ ಕೆಲಸ ಮಾಡುತ್ತಿರುವ ಕಾರ್ಮಿಕ ಸಂಘಗಳೊಂದಿಗೆ ತೊಡಗಿಕೊಳ್ಳುವುದು ಮತ್ತು ಅವರೊಂದಿಗೆ ನಿರಂತರವಾಗಿ ಮುಕ್ತ ಸಮಾಲೋಚನೆಯನ್ನು ನಡೆಸುವುದು;

(viii) ಸ್ಕೀಮುಗಳ ರಚನೆ, ಪುನರೀಕ್ಷಣೆ ಮತ್ತು ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸುಗಳನ್ನು ಮಾಡಲು ಸಮಿತಿಯನ್ನು ರಚಿಸುವುದು;

(ix) ಮಹಿಳೆಯರು, ವಿಕಲಚೇತನ ವ್ಯಕ್ತಿಗಳು, ಮುಂತಾದ ಅಂಥ ನಿರ್ದಿಷ್ಟ ಗುಂಪುಗಳ ಗಿಗ್ ಕಾರ್ಮಿಕರಿಗಾಗಿ ಸಾಮಾಜಿಕ ಭದ್ರತಾ ಸ್ಕೀಮುಗಳನ್ನು ರಚಿಸುವುದು;

(x) ಅವರ ವೇದಿಕೆಗಳ ಮುಖಾಂತರ ಮಾಡಿದ ಕೆಲಸದ ಮೇರೆಗೆ ಸಂಗ್ರಹಕಾರರು ಮತ್ತು ವೇದಿಕೆಗಳಿಂದ ಸಂಗ್ರಹಿತ ದತ್ತಾಂಶವನ್ನು ಪಡೆಯುವುದು.

**7. ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಹಕ್ಕುಗಳು.-** ವೇದಿಕೆ ಆಧಾರಿತ ಗಿಗ್ ಕಾರ್ಮಿಕರು ಈ ಮುಂದಿನ ಹಕ್ಕುಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಕೆಲಸದ ಅವಧಿಯನ್ನು ಗಣನೆಗೆ ತೆಗೆದುಕೊಳ್ಳದೆ ಯಾವುದೇ ವೇದಿಕೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ್ಯೂ ಮಂಡಳಿಯಲ್ಲಿ ನೋಂದಾಯಿಸುವುದು ಮತ್ತು ಎಲ್ಲಾ ವೇದಿಕೆಗಳಿಗೆ ಅನ್ವಯವಾಗುವ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪಡೆಯುವುದು;

(ಬಿ) ಮಂಡಳಿಯು ಅಧಿಸೂಚಿಸಬಹುದಾದಂತೆ ಅವರಿಂದ ನೀಡಲಾದ ದೇಣಿಗೆಗಳ ಆಧಾರದ ಮೇಲೆ ಹಾಗೂ ತ್ರೈಮಾಸಿಕದಲ್ಲಿ ಯಾವುದೇ ಸಂಗ್ರಹಕಾರು ಅಥವಾ ವೇದಿಕೆಯೊಂದಿಗೆ ಗಿಗ್ ಕಾರ್ಮಿಕನು ಕೈಗೊಂಡ ಕನಿಷ್ಠ ಸಂಖ್ಯೆಯ ವಹಿವಾಟುಗಳು ಅಥವಾ ಗಿಗ್ ಕೆಲಸದ ಆಧಾರದ ಮೇಲೆಯೂ ಸಹ ಸಾಮಾನ್ಯ ಮತ್ತು ನಿರ್ದಿಷ್ಟ ಸಾಮಾಜಿಕ ಭದ್ರತಾ ಸ್ಕೀಮುಗಳಿಗೆ ಪ್ರವೇಶಾವಕಾಶ ಪಡೆಯುವುದು ;

(ಸಿ) ಪ್ರಕರಣ 22ರಲ್ಲಿ ನಿರ್ದಿಷ್ಟಪಡಿಸಿದಂತೆ ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಯ ಪ್ರವೇಶಾವಕಾಶ ಪಡೆಯುವುದು:

ಪರಂತು, ಈ ಅಧಿನಿಯಮದಲ್ಲಿರುವುದಾವುದೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಡಿ ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ನೀಡಲಾದ ಯಾವುದೇ ಪ್ರಯೋಜನ ಅಥವಾ ರಕ್ಷಣೆಯ ಮೇಲೆ ಪರಿಣಾಮ ಬೀರತಕ್ಕದ್ದಲ್ಲ.

**8. ಮಂಡಳಿಯ ಅಧಿಕಾರಿಗಳು ಮತ್ತು ನೌಕರರು.-** ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ಚಲಾಯಿಸಲು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಅಧಿಕಾರಿಗಳು ಮತ್ತು ನೌಕರರನ್ನು, ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಮಂಡಳಿಯ ಅಧಿಕಾರಿಗಳು ಮತ್ತು ನೌಕರರೆಂದು ಪರಿಗಣಿಸತಕ್ಕದ್ದು.

**9. ಲೆಕ್ಕ ಪತ್ರ ಮತ್ತು ಲೆಕ್ಕಪರಿಶೋಧನೆ.-** (1) ಮಂಡಳಿಯು ಸೂಕ್ತ ಲೆಕ್ಕಪತ್ರಗಳು ಮತ್ತು ಇತರೆ ಸಂಬಂಧಿತ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ರಾಜ್ಯದ ಮಹಾಲೇಖಪಾಲರೊಂದಿಗೆ

ಸಮಾಲೋಚಿಸಿ ನಿಯಮಿಸಬಹುದಾದಂಥ ನಮೂನೆಯಲ್ಲಿ ವಾರ್ಷಿಕ ಲೆಕ್ಕಪತ್ರಗಳ ವಿವರಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಮಂಡಳಿಯ ಲೆಕ್ಕಪತ್ರಗಳನ್ನು ರಾಜ್ಯದ ಮಹಾಲೇಖಪಾಲರ ಕಚೇರಿಯು ವಾರ್ಷಿಕವಾಗಿ ಲೆಕ್ಕಪರಿಶೋಧನೆ ನಡೆಸತಕ್ಕದ್ದು.

(3) ಲೆಕ್ಕಪರಿಶೋಧಕನು ಪ್ರಮಾಣೀಕರಿಸಿದ ಮಂಡಳಿಯ ಲೆಕ್ಕಪತ್ರಗಳನ್ನು, ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ನಿಯಮಿಸಬಹುದಾದಂಥ ದಿನಾಂಕದ ಮೊದಲು ರಾಜ್ಯ ಸರ್ಕಾರಕ್ಕೆ ವಾರ್ಷಿಕವಾಗಿ ಸಲ್ಲಿಸತಕ್ಕದ್ದು.

(4) ರಾಜ್ಯ ಸರ್ಕಾರವು ಲೆಕ್ಕಪರಿಶೋಧಕನ ವರದಿಯ ಅವಗಾಹನೆಯ ತರುವಾಯ ಹೊರಡಿಸಲು ಸೂಕ್ತವೆಂದು ಭಾವಿಸುವ ಅಂಥ ನಿರ್ದೇಶನಗಳನ್ನು ಮಂಡಳಿಯು ಪಾಲಿಸತಕ್ಕದ್ದು.

(5) ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂತೆ ಲೆಕ್ಕಪರಿಶೋಧನೆಯ ವೆಚ್ಚವನ್ನು ನಿಧಿಯ ಆಡಳಿತಾತ್ಮಕ ವೆಚ್ಚದಿಂದ ಪಾವತಿಸತಕ್ಕದ್ದು.

(6) ನಿಧಿಯ ಭಾಗವಾಗಿರುವ ಎಲ್ಲಾ ಮೊತ್ತಗಳನ್ನು ಸರ್ಕಾರವು ನಿಯಮಿಸಬಹುದಾದಂತೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನ ಅಥವಾ ಚಾಲ್ತಿ ಅಥವಾ ಠೇವಣಿ ಖಾತೆಯಲ್ಲಿರಿಸತಕ್ಕದ್ದು.

**10. ಗಿಗ್ ಕಾರ್ಮಿಕರ ನೋಂದಣಿ.-** (1) ಸಂಗ್ರಹಕಾರರು ಅಥವಾ ವೇದಿಕೆಗಳು ತಮ್ಮಲ್ಲಿ ಕಾರ್ಯನಿರ್ವಹಿಸುತ್ತಿರುವ ಅಥವಾ ನೋಂದಾಯಿಸಿದ ಎಲ್ಲಾ ಗಿಗ್ ಕಾರ್ಮಿಕರ ದತ್ತಾಂಶವನ್ನು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ನಲವತ್ತೈದು ದಿನಗಳೊಳಗಾಗಿ ನಿಯಮಿಸಬಹುದಾದಂಥ ವಿಧಾನದಲ್ಲಿ ಮಂಡಳಿಗೆ ಒದಗಿಸತಕ್ಕದ್ದು.

(2) ಯಾವುದೇ ವೇದಿಕೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಅಥವಾ ನೋಂದಾಯಿಸಿದ ಎಲ್ಲಾ ವೇದಿಕೆ ಆಧಾರಿತ ಗಿಗ್ ಕಾರ್ಮಿಕರು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ವಿದ್ಯುನ್ಮಾನದ ಮೂಲಕ ಮಂಡಳಿಯಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಸಂಗ್ರಹಕಾರರು ಅಥವಾ ವೇದಿಕೆಗಳು (1)ನೇ ಉಪಪ್ರಕರಣದ ಅಡಿಯಲ್ಲಿ ಒದಗಿಸಿದ ದತ್ತಾಂಶದಲ್ಲಿ ಯಾವುದೇ ಬದಲಾವಣೆಗಳು ಅಂದರೆ, ಗಿಗ್ ಕಾರ್ಮಿಕರ ಸಂಖ್ಯೆಯಲ್ಲಿ ಹೆಚ್ಚಳ ಅಥವಾ ಕಡಿಮೆಯಿದ್ದಲ್ಲಿ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿಧಾನದ ಮೂಲಕ ಮಂಡಳಿಯಲ್ಲಿ ಇಂದೀಕರಿಸತಕ್ಕದ್ದು.

(3) ಮಂಡಳಿಯು ರಾಜ್ಯದಲ್ಲಿರುವ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ದತ್ತಾಂಶವನ್ನು, ಯಾವುದೇ ವೇದಿಕೆಯೊಂದಿಗೆ ಅವರ ಕರಾರುಬದ್ಧ ಪಾಲ್ಗೊಳ್ಳುವಿಕೆಯ ಕಾಲಾವಧಿಯು ಏನೇ ಇದ್ದರೂ ಹಾಗೂ ಒಂದು ಅಥವಾ ಹೆಚ್ಚಿನ ಸಂಗ್ರಹಕಾರರಲ್ಲಿನ ಅವರ ಉದ್ಯೋಗದ ವಿವರಗಳನ್ನು ನಿರ್ವಹಿಸತಕ್ಕದ್ದು.

(4) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಅಥವಾ ಹೆಚ್ಚಿನ ಸಂಗ್ರಹಕಾರರು ಅಥವಾ ವೇದಿಕೆಗಳಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬ ಗಿಗ್ ಕಾರ್ಮಿಕನನ್ನು ಮಂಡಳಿಯು ನೋಂದಾಯಿಸಿಕೊಳ್ಳತಕ್ಕದ್ದು ಮತ್ತು ಅವರಿಗೆ ಒಂದು ವಿಶಿಷ್ಟ ಗುರುತಿನ ಸಂಖ್ಯೆಯನ್ನು ಸೃಜಿಸತಕ್ಕದ್ದು.

ಪರಂತು, ಮಂಡಳಿಯು ಸಂಗ್ರಹಕಾರರಿಂದ ಮತ್ತು ಗಿಗ್ ಕಾರ್ಮಿಕರಿಂದ ಹಾಗೆ ಸಂಗ್ರಹಿಸಿದ ದತ್ತಾಂಶವನ್ನು ಈ ಅಧಿನಿಯಮದ ಉದ್ದೇಶವನ್ನು ಈಡೇರಿಸಲು ಬಳಸತಕ್ಕದ್ದು.

**11. ಸಂಗ್ರಹಕಾರರ ಅಥವಾ ವೇದಿಕೆಗಳ ನೋಂದಣಿ.-** (1) ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ನಲವತ್ತೈದು ದಿನಗಳೊಳಗಾಗಿ ಪ್ರತಿಯೊಬ್ಬ ಸಂಗ್ರಹಕಾರರು ಅಥವಾ ವೇದಿಕೆಗಳು ಮಂಡಳಿಯಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು.

(2) ಮಂಡಳಿಯು ಈ ಅಧಿನಿಯಮದ ಅಡಿಯಲ್ಲಿನ ಹೊಣೆಗಾರಿಕೆಗಳನ್ನು ಕೈಗೊಳ್ಳಲು ಜವಾಬ್ದಾರಿಯಾಗಿರುವ ರಾಜ್ಯ ಸರ್ಕಾರವು ಅಧಿಸೂಚಿಸಿದ ಅಧಿಕಾರಿಯ ಹೆಸರು ಮತ್ತು ಪದನಾಮದೊಂದಿಗೆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಗ್ರಹಕಾರರು ಅಥವಾ ವೇದಿಕೆಗಳ ವಹಿಯನ್ನು ನಿರ್ವಹಿಸತಕ್ಕದ್ದು.

(3) ಮಂಡಳಿಯು ನಿಯಮಿಸಬಹುದಾದಂತೆ ಅದರ ವೆಬ್ ಪೋರ್ಟಲ್‌ನಲ್ಲಿ ಸಂಗ್ರಹಕಾರರ ಅಥವಾ ವೇದಿಕೆಗಳ ವಹಿಯನ್ನು ಪ್ರಕಟಿಸತಕ್ಕದ್ದು.

**12. ನ್ಯಾಯೋಚಿತ ಒಪ್ಪಂದಗಳನ್ನು ಮಾಡಿಕೊಳ್ಳುವ ಹೊಣೆಗಾರಿಕೆ.-** (1) ಸಂಗ್ರಹಕಾರರು ಮತ್ತು ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ನಡುವೆ ಮಾಡಿಕೊಳ್ಳುವ ಎಲ್ಲಾ ಒಪ್ಪಂದಗಳು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಇರತಕ್ಕದ್ದು.

(2) ಎಲ್ಲಾ ಒಪ್ಪಂದಗಳ ನಿಬಂಧನೆಗಳು ಸಂಬಂಧಪಟ್ಟ ಕಾರ್ಮಿಕರಿಗೆ ಪಾರದರ್ಶಕವಾಗಿ ಮತ್ತು ಸಮಗ್ರವಾಗಿ ಇರತಕ್ಕದ್ದು ಮತ್ತು ಮಾಡಿದ ಎಲ್ಲಾ ಕೆಲಸಗಳ ಸಂದಾಯಗಳು, ಕಟಾವಣೆಗಳು, ಪ್ರೋತ್ಸಾಹಧನಗಳು ಹಾಗೂ ಲೆಕ್ಕಾಚಾರಗಳನ್ನು ಒಳಗೊಂಡು ಅಂಶದ ನ್ಯಾಯೋಚಿತ ನಿಬಂಧನೆಗಳು ಮತ್ತು/ಅಥವಾ ಕಾಲಿಕ ದರ ಮಾನದಂಡಗಳಿಗೆ ಅನುಸಾರವಾಗಿರತಕ್ಕದ್ದು ಹಾಗೂ ನೀಡಲಾದ ಗುರಿಗಳನ್ನು ತಿರಸ್ಕರಿಸುವ ಕಾರ್ಮಿಕರ ಹಕ್ಕನ್ನು ಸ್ಪಷ್ಟವಾಗಿ ಹೊಂದಿರತಕ್ಕದ್ದು.

(3) ಒಮ್ಮೆ ಒಪ್ಪಂದವನ್ನು ಮಾಡಿಕೊಂಡಲ್ಲಿ, ಸಂಗ್ರಹಕಾರರು ಅಥವಾ ವೇದಿಕೆಗಳು ಒಪ್ಪಂದದಲ್ಲಿನ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಯನ್ನು, ಪ್ರಸ್ತಾವಿತ ಬದಲಾವಣೆಗೆ 14 ದಿನಗಳಿಗೆ ಕಡಿಮೆಯಲ್ಲದ ಅವಧಿಗೆ ಮೊದಲು ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಗಮನಕ್ಕೆ ತರತಕ್ಕದ್ದು.

**13. ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಗಳ ಸಂಬಂಧದಲ್ಲಿನ ಪಾರದರ್ಶಕತೆ.-** (1) ಬೆಲೆಗಳು, ಗಳಿಕೆಗಳು, ಗ್ರಾಹಕರ ಪ್ರತಿಕ್ರಿಯೆ ಮತ್ತು ಸಂಬಂಧಿತ ಮಾಹಿತಿಗೆ ಮಿತಿಗೊಳ್ಳದೆ ಅದನ್ನೊಳಗೊಂಡು ಅವರ ಕೆಲಸ ಮಾಡುವ ಸ್ಥಿತಿಗತಿಗಳ ಮೇಲೆ ಪರಿಣಾಮವನ್ನು ಹೊಂದಿರುವ, ಸಂಗ್ರಹಕಾರ ಅಥವಾ ವೇದಿಕೆಯು ನಿಯೋಜಿಸಿದ ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ಮಾನದಂಡಗಳ ಸಂಬಂಧದಲ್ಲಿ ಮಾಹಿತಿ ಪಡೆಯುವ ಕಾರ್ಯವಿಧಾನದ ಕುರಿತು ಸರಳ ಭಾಷೆಯಲ್ಲಿ ಮತ್ತು ಕನ್ನಡ, ಇಂಗ್ಲಿಷ್ ಅಥವಾ ಗಿಗ್ ಕಾರ್ಮಿಕನಿಗೆ ತಿಳಿದಿರುವ ಭಾರತ ಸಂವಿಧಾನದ ಎಂಟನೇ ಅನುಸೂಚಿಯಲ್ಲಿ ಪಟ್ಟಿ ಮಾಡಿದ ಯಾವುದೇ ಇತರ ಭಾಷೆಯಲ್ಲಿ ಗಿಗ್ ಕಾರ್ಮಿಕನಿಗೆ ಸಂಗ್ರಹಕಾರ ಅಥವಾ ವೇದಿಕೆಯು ನಿಯಮಿಸಬಹುದಾದಂತೆ ಮಾಹಿತಿಯನ್ನು ನೀಡತಕ್ಕದ್ದು.

(2) ಸಂಗ್ರಹಕಾರ ಅಥವಾ ವೇದಿಕೆಗಳು ಅವುಗಳಿಂದ ನಿಯೋಜಿಸಲಾದ ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಗಳ ಮೂಲಕ ಧರ್ಮ, ವಂಶ, ಜಾತಿ, ಲಿಂಗ, ಹುಟ್ಟಿದ ಸ್ಥಳದ ಆಧಾರದ ಮೇಲೆ ಅಥವಾ ವೈಕಲ್ಯತೆಯ ಆಧಾರದಲ್ಲಿ ತಾರತಮ್ಯವನ್ನು ತಡೆಯಲು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**14. ಕೆಲಸವನ್ನು ಕೊನೆಗೊಳಿಸುವಿಕೆ.-** (1) ಸಂಗ್ರಹಕಾರ ಮತ್ತು ವೇದಿಕೆ ಆಧಾರಿತ ಗಿಗ್ ಕಾರ್ಮಿಕನ ನಡುವೆ ಏರ್ಪಟ್ಟ ಕರಾರು ಒಪ್ಪಂದವು, ಸಂಗ್ರಹಕಾರನು ಒಪ್ಪಂದವನ್ನು ಕೊನೆಗೊಳಿಸುವುದಕ್ಕಾಗಿನ ಅಥವಾ ವೇದಿಕೆಯಿಂದ ಗಿಗ್ ಕಾರ್ಮಿಕನು ನಿಷ್ಕ್ರಿಯನಾದ ಕುರಿತಾದ ಆಧಾರಗಳ ಸಮಗ್ರ ಪಟ್ಟಿಯನ್ನು ಒಳಗೊಂಡಿರತಕ್ಕದ್ದು.

(2) ಲಿಖಿತದಲ್ಲಿ ಸೂಕ್ತ ಕಾರಣಗಳಿಲ್ಲದೆ ಮತ್ತು ಹದಿನಾಲ್ಕು ದಿನಗಳ ಪೂರ್ವ ತಿಳುವಳಿಕೆಯಿಲ್ಲದೆ ಹಾಗೂ ನೈಸರ್ಗಿಕ ನ್ಯಾಯದ ತತ್ವಗಳನ್ನು ಪಾಲಿಸದೆ ಸಂಗ್ರಹಕಾರನು ಗಿಗ್ ಕಾರ್ಮಿಕನನ್ನು ಕೆಲಸದಿಂದ ಕೊನೆಗೊಳಿಸತಕ್ಕದ್ದಲ್ಲ.

ಪರಂತು ದೈಹಿಕ ಹಾನಿಯ ಪ್ರಕರಣಗಳನ್ನು ಒಳಗೊಂಡು ಅಮಾನತ್ತುಪಡಿಸುವುದಕ್ಕಾಗಿ ಆಧಾರವಿರುವ ಯಾವುದೇ ಸನ್ನಿವೇಶದಲ್ಲಿ, ಹದಿನಾಲ್ಕು ದಿನಗಳ ಪೂರ್ವ ತಿಳುವಳಿಕೆ ಇಲ್ಲದೆ ಕೂಡಲೇ ಸಂಗ್ರಹಕಾರನು ಕೆಲಸದಿಂದ ತೆಗೆದುಹಾಕಲು ಕಾರ್ಯಪ್ರವೃತ್ತನಾಗುವುದು. ಆದಾಗ್ಯೂ ಕಾರ್ಮಿಕನು ನಿಯಮಿಸಬಹುದಾದಂತೆ ತೀರ್ಮಾನಕ್ಕೆ ಮೇಲ್ಮನವಿ ಸಲ್ಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

**15. ಆದಾಯ ಭದ್ರತೆ.-** (1) ಪಾವತಿ ಕಟಾವಣೆಗಳ ಸಂದರ್ಭದಲ್ಲಿ, ವೇದಿಕೆ ಆಧಾರಿತ ಗಿಗ್ ಕಾರ್ಮಿಕನು ನಿರ್ವಹಿಸಿದ ಕೆಲಸಕ್ಕಾಗಿ ಮಾಡಲಾದ ಬೆಲೆಪಟ್ಟಿಯೊಳಗೆ ಅಂಥ ಕಟಾವಣೆಗಳಿಗಾಗಿನ ಕಾರಣಗಳ ಕುರಿತು ವೇದಿಕೆ ಆಧಾರಿತ ಗಿಗ್ ಕಾರ್ಮಿಕನಿಗೆ ಸಂಗ್ರಹಕಾರ ಅಥವಾ ವೇದಿಕೆಯು ಮಾಹಿತಿಯನ್ನು ನೀಡತಕ್ಕದ್ದು. ಪತ್ರಿ ಸಂಗ್ರಹಕಾರ ಅಥವಾ ವೇದಿಕೆಯು ಕಡ್ಡಾಯವಾಗಿ ಕರಾರಿನನುಸಾರ ಪಾವತಿನೀಡಿಕೆಯನ್ನು (payout) ಮಾಡತಕ್ಕದ್ದು ಮತ್ತು ದಿನಕ್ಕೆ ಅಥವಾ ವಾರಕ್ಕೆ ಅಥವಾ ಎರಡು ವಾರಕ್ಕೆ ಅಥವಾ ತಿಂಗಳ ಪಾವತಿ ನೀಡಿಕೆ ಆವರ್ತದಲ್ಲಿ ಅಂಥ ಪಾವತಿಯನ್ನು ಮಾಡತಕ್ಕದ್ದು.

(2) ಸಂಗ್ರಹಕಾರ ಅಥವಾ ವೇದಿಕೆಯು ವೇತನ ಬಟವಾಡೆಯಲ್ಲಿ ಯಾವುದೇ ವಿಳಂಬವನ್ನು ಮಾಡದೇ ಕನಿಷ್ಠಪಕ್ಷ ವಾರದ ಆಧಾರದ ಮೇಲೆ ವೇದಿಕೆ ಆಧಾರಿತ ಗಿಗ್ ಕಾರ್ಮಿಕನಿಗೆ ನಷ್ಟಭರ್ತಿ ಮಾಡತಕ್ಕದ್ದು.

**16. ಯುಕ್ತ ಕೆಲಸದ ಸ್ಥಿತಿಗತಿಗಳು.-** (1) ವೇದಿಕೆ ಆಧಾರಿತ ಗಿಗ್ ಕಾರ್ಮಿಕನಿಗೆ ಸುರಕ್ಷಿತ ಮತ್ತು ಆರೋಗ್ಯಕ್ಕೆ ಅಪಾಯವಿಲ್ಲದ ಯುಕ್ತ ಕೆಲಸದ ವಾತಾವರಣವನ್ನು ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ಸಂಗ್ರಹಕಾರ ಅಥವಾ ವೇದಿಕೆಯು ಕಲ್ಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

**ವಿವರಣೆ**:- “ಯುಕ್ತ ಕೆಲಸದ ವಾತಾವರಣ” ಎಂದರೆ, ಕೆಲಸದ ದಿನದಲ್ಲಿ ಮತ್ತು ವಾರದ ಕೆಲಸದಲ್ಲಿ ವೇದಿಕೆ ಆಧಾರಿತ ಗಿಗ್ ಕಾರ್ಮಿಕನು ಸಾಕಷ್ಟು ವಿರಾಮದ ಅವಧಿಗಳನ್ನು ಹೊಂದಿರುವಂತೆ, ಸುಸಂಗತ ಪ್ರಯಾಣಕಾಲ ಮತ್ತು ಅಂಥ ಸೌಕರ್ಯಗಳನ್ನು ಒಳಗೊಂಡು ನೈರ್ಮಲ್ಯ ಮತ್ತು ವಿರಾಮ ಸೌಲಭ್ಯಗಳಿಗೆ ಅವಕಾಶವನ್ನು ಒಳಗೊಂಡಂತೆ ವೇದಿಕೆ ಆಧಾರಿತ ಗಿಗ್ ಕಾರ್ಮಿಕನಿಗೆ ಸುರಕ್ಷಿತ ಮತ್ತು ಆರೋಗ್ಯಕ್ಕೆ ಅಪಾಯಕಾರಿಯಲ್ಲದ ಕೆಲಸದ ವಾತಾವರಣ.

(2) ಸಂಗ್ರಹಕಾರ ಅಥವಾ ವೇದಿಕೆಯು ನಿಯಮಿಸಬಹುದಾದಂಥ ಅನ್ವಯವಾಗುವ, ವಲಯ ನಿರ್ದಿಷ್ಟ, ವೃತ್ತಿಜನ್ಯ ಸುರಕ್ಷತೆ ಮತ್ತು ಆರೋಗ್ಯ ಗುಣಮಟ್ಟಗಳನ್ನು ಪಾಲನೆ ಮಾಡತಕ್ಕದ್ದು.

**17. ಹೊಣೆಗಾರಿಕೆಗಳ ಬಹಿರಂಗಪಡಿಸುವಿಕೆ.-** (1) 22ನೇ ಪ್ರಕರಣದಲ್ಲಿನ ಕುಂದುಕೊರತೆ ನಿವಾರಣಾ ಕಾರ್ಯವ್ಯವಸ್ಥೆಯ ಮೇಲಿನ ಮಾಹಿತಿಯನ್ನು, ಅವರ ಸಂಬಂಧಪಟ್ಟ ವೇದಿಕೆಯಲ್ಲಿ ಸುಲಭವಾಗಿ ದೊರಕುವುದನ್ನು ಸಂಗ್ರಹಕಾರ ಅಥವಾ ವೇದಿಕೆಯು ಖಚಿತಪಡಿಸಿಕೊಳ್ಳತಕ್ಕದ್ದು.

(2) 22ನೇ ಪ್ರಕರಣದಲ್ಲಿನ ವಿವಾದ ನಿವಾರಣಾ ಕಾರ್ಯವ್ಯವಸ್ಥೆಯ ಮೇಲಿನ ಮಾಹಿತಿಯನ್ನು ಅವರ ವೇದಿಕೆಯಲ್ಲಿ ಸುಲಭವಾಗಿ ದೊರಕುವುದನ್ನು ಸಂಗ್ರಹಕಾರ ಅಥವಾ ವೇದಿಕೆಯು ಖಚಿತಪಡಿಸಿಕೊಳ್ಳತಕ್ಕದ್ದು.

(3) ಸಂಗ್ರಹಕಾರ ಅಥವಾ ವೇದಿಕೆಯು ಹೊಣೆಗಾರಿಕೆಗಳ ಬಹಿರಂಗಪಡಿಸುವಿಕೆಯನ್ನು ಪ್ರಕಟಿಸುವ ವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

**18. ವಿಚಾರಣೆಗಳಿಗಾಗಿ ಸಂಪರ್ಕ ಕೇಂದ್ರದ ನಾಮನಿರ್ದೇಶನ.-** (1) ಪ್ರತಿಯೊಬ್ಬ ವೇದಿಕೆ ಆಧಾರಿತ ಗಿಗ್ ಕಾರ್ಮಿಕನಿಗೆ, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿನ ಎಲ್ಲಾ ಸ್ಪಷ್ಟೀಕರಣಗಳಿಗಾಗಿ ಮಾನವ ಸಂಪರ್ಕ ಕೇಂದ್ರವನ್ನು ಒದಗಿಸತಕ್ಕದ್ದು:

ಪರಂತು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ವೇದಿಕೆ ಆಧಾರಿತ ಗಿಗ್ ಕಾರ್ಮಿಕರು ಸ್ಪಷ್ಟೀಕರಣಗಳನ್ನು ಪಡೆಯಲು ಸಂಗ್ರಹಕಾರ ಅಥವಾ ವೇದಿಕೆಯು ಭೌತಿಕ ಸ್ಥಳಾವಕಾಶಗಳನ್ನು ನಿರ್ವಹಿಸಬಹುದು.

(2) ಗಿಗ್ ಕಾರ್ಮಿಕರು ಸಂಪರ್ಕ ವ್ಯಕ್ತಿಯೊಂದಿಗೆ ಕನ್ನಡ, ಇಂಗ್ಲಿಷ್ ಅಥವಾ ವೇದಿಕೆ ಆಧಾರಿತ ಗಿಗ್ ಕಾರ್ಮಿಕನಿಗೆ ತಿಳಿದಿರುವ ಭಾರತ ಸಂವಿಧಾನದ ಎಂಟನೇ ಅನುಸೂಚಿಯಲ್ಲಿ ಪಟ್ಟಿ ಮಾಡಿದ ಯಾವುದೇ ಇತರ ಭಾಷೆಯಲ್ಲಿ ಸಂವಹನ ನಡೆಸುವ ಆಯ್ಕೆಯನ್ನು ಹೊಂದಿರತಕ್ಕದ್ದು.

(3) ಸಂಪರ್ಕ ವ್ಯಕ್ತಿಯನ್ನು ಸಂಪರ್ಕಿಸುವ ಮಾಹಿತಿಯು ವೇದಿಕೆಯ ಅನ್ವಯಿಕೆ (App) ಯಲ್ಲಿನ ಸಂಬಂಧಪಟ್ಟ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಖಾತೆಯಲ್ಲಿ ಒದಗಿಸತಕ್ಕದ್ದು.

**19. ಗಿಗ್ ಕಾರ್ಮಿಕರಿಗಾಗಿ ನಿಧಿ.-** (1) ಸರ್ಕಾರವು, ನೋಂದಾಯಿಸಿದ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಪ್ರಯೋಜನಕ್ಕಾಗಿ ಕರ್ನಾಟಕ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ನಿಧಿ ಎಂದು ಕರೆಯಲಾಗುವ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಈ ಕೆಳಕಂಡ ಮೊತ್ತವು ಅದರ ಭಾಗವಾಗಿ ಹಾಗೂ ಪಾವತಿಯ ರೂಪದಲ್ಲಿರತಕ್ಕದ್ದು, ಎಂದರೆ:-

(i) ಈ ಅಧಿನಿಯಮದಡಿಯಲ್ಲಿ ವಿಧಿಸಲಾದ ಕ್ಷೇಮಾಭಿವೃದ್ಧಿ ಶುಲ್ಕದಿಂದ ಸ್ವೀಕರಿಸಿದ ಎಲ್ಲಾ ಮೊತ್ತಗಳು;

(ii) ವೇದಿಕೆ ಆಧಾರಿತ ಗಿಗ್ ಕಾರ್ಮಿಕರು ವೈಯಕ್ತಿಕವಾಗಿ ನೀಡಿದ ಎಲ್ಲಾ ವಂತಿಗೆಗಳು;

(iii) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಸಹಾಯಧನವಾಗಿ ಸ್ವೀಕರಿಸಿದ ಎಲ್ಲಾ ಮೊತ್ತಗಳು;

(iv) ಅನುದಾನಗಳು, ಕೊಡುಗೆಗಳು, ದೇಣಿಗಳು, ಉಪಕಾರಗಳು, ಉಯಿಲುಗಳು ಅಥವಾ ವರ್ಗಾವಣೆಗಳ ರೂಪದಲ್ಲಿ ಸ್ವೀಕರಿಸಿದ ಎಲ್ಲಾ ಮೊತ್ತಗಳು; ಮತ್ತು

(v) ನಿಯಮಿಸಬಹುದಾದಂತೆ ಯಾವುದೇ ಇತರ ಮೂಲಗಳಿಂದ ಸ್ವೀಕರಿಸಿದ ಎಲ್ಲಾ ಮೊತ್ತಗಳು;

(2) ನಿಯಮಿಸಬಹುದಾದಂಥ ವಿಧಾನದಲ್ಲಿ ಮಂಡಳಿಯು ನಿಧಿಯನ್ನು ಬಳಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(3) ಮಂಡಳಿಯ ಅಥವಾ ಮಂಡಳಿಯ ಉದ್ಯೋಗಿಗಳ ಯಾವುದೇ ಆಡಳಿತಾತ್ಮಕ ವೆಚ್ಚಗಳನ್ನು ಖರ್ಚುಮಾಡಲು ನಿಧಿಯಿಂದ ಶೇಕಡ ಐದರಷ್ಟನ್ನು ಮೀರದಂತೆ ವ್ಯಯಿಸತಕ್ಕದ್ದಲ್ಲ.

**20. ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕ.-** (1) ಸಂಗ್ರಹಕಾರರು ಅಥವಾ ವೇದಿಕೆಗಳಿಂದ "ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕ" ವೆಂದು ಕರೆಯುವ ಕ್ಷೇಮಾಭಿವೃದ್ಧಿ ಶುಲ್ಕವನ್ನು ವಿಧಿಸತಕ್ಕದ್ದು, ಅದು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಅಧಿನಿಯಮ**ವು** ಜಾರಿಗೆ ಬಂದ ಆರು ತಿಂಗಳೊಳಗಾಗಿ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಪ್ರತಿಯೊಂದು ವಹಿವಾಟಿನಲ್ಲಿ ಪಾವತಿ ನೀಡಿಕೆಯ ಶೇಕಡಾ ಒಂದರಷ್ಟಕ್ಕೆ ಕಡಿಮೆಯಲ್ಲದ ಆದರೆ ಶೇಕಡಾ ಐದರಷ್ಟನ್ನು ಮೀರದಂತೆ ಇರತಕ್ಕದ್ದು.

(2) ರಾಜ್ಯ ಸರ್ಕಾರವು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ವಿವಿಧ ವರ್ಗದ ಸಂಗ್ರಹಕಾರರಿಗಾಗಿ ಪ್ರತಿಯೊಂದು ವಹಿವಾಟಿನ ಮೇಲೆ ಕ್ಯಾಪ್‌ಯುಕ್ತ ಅಥವಾ ಕ್ಯಾಪ್ ಇಲ್ಲದೆ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕ ಪಾವತಿ ನೀಡಿಕೆ ಮೇಲೆ ವಿವಿಧ ಶೇಕಡಾವಾರನ್ನು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸತಕ್ಕದ್ದು.

(3) ಶುಲ್ಕವನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಸಮಯದೊಳಗೆ ರಾಜ್ಯ ಸರ್ಕಾರವು ಸಂಗ್ರಹಿಸತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ವಿಧಿಸಲಾದ ಕ್ಷೇಮಾಭಿವೃದ್ಧಿ ಶುಲ್ಕವನ್ನು ಪ್ರತಿ ತ್ರೈಮಾಸಿಕದ ಕೊನೆಯಲ್ಲಿ ನಿಯಮಿಸಬಹುದಾದಂಥ ವಿಧಾನದಲ್ಲಿ ಸಂಗ್ರಹಕಾರ ಅಥವಾ ವೇದಿಕೆಯು ಠೇವಣಿ ಇರಿಸತಕ್ಕದ್ದು.

(5) ಹಾಗೆ ಸಂಗ್ರಹಿಸಲಾದ ಕ್ಷೇಮಾಭಿವೃದ್ಧಿ ಶುಲ್ಕವು, ಸಾಮಾಜಿಕ ಭದ್ರತಾ ಸಂಹಿತೆ, 2020 (2020ರ ಕೇಂದ್ರ ಅಧಿನಿಯಮ ಸಂ. 36)ರ 114ನೇ ಪ್ರಕರಣದ (4)ನೇ ಉಪ-ಪ್ರಕರಣದಡಿ ಪಾವತಿಸಬಹುದಾದ ಒಟ್ಟಾರೆ ವಂತಿಗೆಯಾಗಿ ಲೆಕ್ಕ ಹಾಕತಕ್ಕದ್ದು:

ಪರಂತು ಸಂಗ್ರಹಿಸಲಾದ ಕ್ಷೇಮಾಭಿವೃದ್ಧಿ ಶುಲ್ಕ ಮತ್ತು ಒಟ್ಟಾರೆ ಮೊತ್ತವಾಗಿ ಪಾವತಿಸಬಹುದಾದ ವಂತಿಗೆಯ ನಡುವೆ ವ್ಯತ್ಯಾಸವಿದ್ದರೆ, ಅದನ್ನು ನಿಯಮಿಸಬಹುದಾದಂತೆ ವಾರ್ಷಿಕ ಆಧಾರದ ಮೇಲೆ ಬಗೆಹರಿಸಬಹುದು.

(6) ಯಾರೇ ಸಂಗ್ರಹಕಾರ ಅಥವಾ ವೇದಿಕೆಯು ಉಪಪ್ರಕರಣ (1)ರಡಿ ನಿರ್ದಿಷ್ಟಪಡಿಸಲಾದಂತೆ ಯಾವುದೇ ಮೊತ್ತವನ್ನು ಪಾವತಿಸಲು ವಿಫಲನಾದರೆ, ಅಂಥ ಮೊತ್ತವು ಬಾಕಿಯಿರುವ ದಿನಾಂಕದಿಂದ ಅಂಥ ಮೊತ್ತವನ್ನು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ದರದಲ್ಲಿ (ಶೇಕಡಾವಾರು) ವಾಸ್ತವಿಕವಾಗಿ ಪಾವತಿಸುವವರೆಗೆ ಬಾಕಿ ಮೊತ್ತದ ಮೇಲೆ ಸರಳ ಬಡ್ಡಿಯನ್ನು ಪಾವತಿಸಲು ಹೊಣೆಗಾರನಾಗತಕ್ಕದ್ದು.

**21. ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆ.-** (1) ವೇದಿಕೆಗಳಲ್ಲಿ ಮಾಡಲಾದ ಪ್ರತಿಯೊಂದು ವಹಿವಾಟಿನ ಮೂಲಕ ಉಂಟಾದ ಎಲ್ಲಾ ಸಂದಾಯಗಳನ್ನು ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯಲ್ಲಿ (PWFVS) ಇರಿಸತಕ್ಕದ್ದು, ಅದನ್ನು ರಾಜ್ಯ ಸರ್ಕಾರವು ನಿರ್ವಹಿಸತಕ್ಕದ್ದು ಮತ್ತು ಮಂಡಳಿಯು ಮೇಲ್ವಿಚಾರಣೆ ನಡೆಸತಕ್ಕದ್ದು.

(2) ಗಿಗ್ ಕಾರ್ಮಿಕರಿಗೆ ಮಾಡಲಾದ ಪ್ರತಿಯೊಂದು ಪಾವತಿಯು ಮತ್ತು ಕಟಾವಣೆ ಮಾಡಲಾದ ಕ್ಷೇಮಾಭಿವೃದ್ಧಿ ಶುಲ್ಕವನ್ನು ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ಸಂಬಂಧಿಸಿದ ಪ್ರತಿಯೊಂದು

ವಹಿವಾಟಿಗಾಗಿ ನಿಯಮಿಸಬಹುದಾದಂಥ ವಿಧಾನದಲ್ಲಿ ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯಲ್ಲಿ (PWFVS) ದಾಖಲಿಸತಕ್ಕದ್ದು.

(3) ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಹಂತದಲ್ಲಿ ಸಂಗ್ರಹಿಸಿದ ಮತ್ತು ವ್ಯಯಿಸಿದ ಕ್ಷೇಮಾಭಿವೃದ್ಧಿ ಶುಲ್ಕದ ವಿವರಗಳನ್ನು ಬಹಿರಂಗಪಡಿಸತಕ್ಕದ್ದು ಹಾಗೂ ಅದನ್ನು ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯಲ್ಲಿ (PWFVS) ಲಭ್ಯವಾಗುವಂತೆ ಮಾಡತಕ್ಕದ್ದು.

(4) ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯು (PWFVS) ದತ್ತಾಂಶ ರಕ್ಷಣೆಯ ಮೇಲೆ ತತ್ಕಾಲದಲ್ಲಿ ಜಾರಿಯಲ್ಲಿರುವ ಅನ್ವಯವಾಗುವ ಕೇಂದ್ರ ಮತ್ತು ರಾಜ್ಯ ಶಾಸನಗಳ ಅನುಸಾರವಾಗಿ ಇರತಕ್ಕದ್ದು:

ಪರಂತು ಮಂಡಳಿಯ ಮೂಲಕ ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯನ್ನು (PWFVS) ಕಾರ್ಯಾಚರಿಸುವವರೆಗೆ, ಸರ್ಕಾರವು ಯುಕ್ತವಾಗಿ ಸ್ವಯಂ ವರದಿಮಾಡಿಕೊಳ್ಳುವ ಮತ್ತು ಪ್ರತಿ ತ್ರೈಮಾಸಿಕ ವಹಿವಾಟಿನಲ್ಲಿ ಅವರ ಗಿಗ್ ಕಾರ್ಮಿಕರಿಗೆ ಪಾವತಿ ನೀಡಿಕೆಯ ವರದಿಗಳನ್ನು ಸಲ್ಲಿಸುವ ಅಂಥ ಸಂಗ್ರಹಕರರು ಅಥವಾ ವೇದಿಕೆಗಳನ್ನು ವಿನಾಯತಿಸಬಹುದು.

**22. ಕುಂದುಕೊರತೆಗಳ ನಿವಾರಣೆ.-** (1) ನೋಂದಾಯಿತ ಗಿಗ್ ಕಾರ್ಮಿಕರು ಎರಡು-ಹಂತಗಳ ಕುಂದುಕೊರತೆ ನಿವಾರಣೆಗಳಿಗಾಗಿ ಹಕ್ಕುಳ್ಳವರಾಗಿರುವರು:-

(ಎ) ಸಂಗ್ರಹಕಾರರ ಅಥವಾ ವೇದಿಕೆಗಳ ವಿರುದ್ಧ; ಮತ್ತು

(ಬಿ) ಮಂಡಳಿಯ ವಿರುದ್ಧ.

(2) ಒಬ್ಬ ವೇದಿಕೆ ಆಧಾರಿತ ಗಿಗ್ ಕಾರ್ಮಿಕನು ಆತನ ಪಾವತಿ ನೀಡಿಕೆಗಳು, ಕಟಾವಣೆಗಳು, ತೆಗೆದುಹಾಕುವಿಕೆ ಮುಂತಾದವುಗಳ ಕುರಿತು ಯಾವುದೇ ಉಲ್ಲಂಘನೆಗೆ ಸಂಬಂಧಿಸಿದಂತೆ, ಎಲ್ಲಾ ನೋಂದಾಯಿತ ಸಂಗ್ರಹಕಾರರು ಅಥವಾ ವೇದಿಕೆಗಳು ನಿಯಮಿಸಬಹುದಾದಂತೆ ರಚಿಸಬೇಕಾದ ಆಂತರಿಕ ವಿವಾದ ಪರಿಹಾರ ಸಮಿತಿಯ ಮುಂದೆ ವೈಯಕ್ತಿಕವಾಗಿ ಕುಂದುಕೊರತೆಯನ್ನು ದಾಖಲಿಸಬಹುದು ಅಥವಾ ವೆಬ್ ಪೋರ್ಟಲ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು:

ಪರಂತು ಅಂಥ ವೆಬ್ ಪೋರ್ಟಲ್ ಲಿಂಕ್ ಅನ್ನು, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತ ಪ್ರತಿ ಸಂಗ್ರಹಕಾರ ಅಥವಾ ವೇದಿಕೆಯು ಅನ್ವಯಿಕೆಯಲ್ಲಿ (app) ಒದಗಿಸತಕ್ಕದ್ದು.

(3) ಉಪಪ್ರಕರಣ (2)ರಡಿ ಸಲ್ಲಿಸಿದ ಅರ್ಜಿಯ ವಿಲೇವಾರಿ ಕಾರ್ಯವಿಧಾನವು ನಿಯಮಿಸಬಹುದಾದಂಥ ರೀತಿಯಲ್ಲಿ ಇರತಕ್ಕದ್ದು.

(4) ಬಾಧಿತ ಪಕ್ಷಕಾರನಿಂದ ಅಥವಾ ಆತನ ಪರವಾಗಿ ಅರ್ಜಿಯನ್ನು ಸ್ವೀಕರಿಸಿದ ಹದಿನಾಲ್ಕು ದಿನಗಳೊಳಗೆ ಆಂತರಿಕ ವಿವಾದ ಪರಿಹಾರ ಸಮಿತಿಯು ಅದರ ವ್ಯವಹರಣೆಗಳನ್ನು ಪೂರ್ಣಗೊಳಿಸತಕ್ಕದ್ದು ಮತ್ತು ದೂರುದಾರನಿಗೆ ಕ್ರಮ ಕೈಗೊಂಡ ಬಗ್ಗೆ ಲಿಖಿತ ವರದಿಯನ್ನು ನೀಡತಕ್ಕದ್ದು.

(5) ಕಾರ್ಮಿಕನು ಕುಂದುಕೊರತೆ ದಾಖಲಿಸಿದ ಹದಿನಾಲ್ಕು ದಿನಗಳೊಳಗಾಗಿ ಕೈಗೊಂಡ ಕ್ರಮದ ಲಿಖಿತ ವರದಿಯನ್ನು ಆಂತರಿಕ ವಿವಾದ ಪರಿಹಾರ ಸಮಿತಿಯಿಂದ ಸ್ವೀಕರಿಸದಿದ್ದರೆ ಮತ್ತು/ಅಥವಾ

ಕಾರ್ಮಿಕನು ಆಂತರಿಕ ವಿವಾದ ಪರಿಹಾರ ಸಮಿತಿಯು ನೀಡಿದ ಪರಿಹಾರದಿಂದ ತೃಪ್ತನಾಗದಿದ್ದರೆ, ಕುಂದುಕೊರತೆಯನ್ನು ಮಂಡಳಿಗೆ ವರ್ಗಾಯಿಸತಕ್ಕದ್ದು, ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(6) ಉಪಪ್ರಕರಣ (2)ರಡಿ ಹಾಗೆ ಅಧಿಕೃತಗೊಳಿಸಲಾದ ಆಂತರಿಕ ವಿವಾದ ಪರಿಹಾರ ಸಮಿತಿಯು ವಿಚಾರಣೆಗಳ ಮೇರೆಗೆ ಸದರಿ ಅರ್ಜಿಯನ್ನು ನಲವತ್ತೈದು ದಿನಗಳೊಳಗಾಗಿ ಪರಿಹಾರ ಆದೇಶವನ್ನು ಹೊರಡಿಸುವ ಮೂಲಕ ವಿಲೇ ಮಾಡತಕ್ಕದ್ದು.

(7) ಈ ಅಧಿನಿಯಮದ ಮೂಲಕ ನೋಂದಾಯಿತ ವೇದಿಕೆ ಆಧಾರಿತ ಗಿಗ್ ಕಾರ್ಮಿಕನು, ಈ ಅಧಿನಿಯಮದಡಿ ಮಂಡಳಿಯು ಒದಗಿಸಿದ ಹಕ್ಕುಗಳು, ಸಾಮಾಜಿಕ ಭದ್ರತಾ ಪಾವತಿಗಳು ಮತ್ತು ಇತರ ಪ್ರಯೋಜನಗಳಿಂದ ಉಂಟಾದ ಯಾವುದೇ ಕುಂದುಕೊರತೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಧಿಸೂಚಿಸಿದ ಕುಂದುಕೊರತೆ ನಿವಾರಣಾ ಅಧಿಕಾರಿಯ ಮುಂದೆ ವಯಕ್ತಿಕವಾಗಿ ಅರ್ಜಿಯನ್ನು ಸಲ್ಲಿಸಬಹುದು ಅಥವಾ ವೆಬ್ ಪೋರ್ಟಲ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದು.

(8) ಉಪಪ್ರಕರಣ (7)ರಡಿ ಸಲ್ಲಿಸಿದ ಅರ್ಜಿಯ ವಿಲೇವಾರಿ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು ಮಂಡಳಿಯು ಅಧಿಸೂಚನೆಯ ಮೂಲಕ ಒಂಬುಡ್ಸ್-ಮನ್ ಅನ್ನು ನೇಮಕ ಮಾಡಬಹುದು.

(9) ಉಪಪ್ರಕರಣ (7)ರಡಿ ಹಾಗೆ ಅಧಿಕೃತಗೊಳಿಸಿದ ಅಧಿಕಾರಿಯು, ವಿಚಾರಣೆಗಳ ಮೇರೆಗೆ ಸದರಿ ಅರ್ಜಿಯನ್ನು ಪರಿಹಾರ ಆದೇಶ ಹೊರಡಿಸುವ ಮೂಲಕ ವಿಲೇ ಮಾಡತಕ್ಕದ್ದು.

(10) ಉಪಪ್ರಕರಣ (9)ರಡಿ ಮಾಡಲಾದ ಆದೇಶದ ವಿರುದ್ಧದ ಮೇಲ್ಮನವಿಯನ್ನು ಆದೇಶದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ರಾಜ್ಯ ಸರ್ಕಾರವು ಅಧಿಸೂಚಿಸಿದ ಮೇಲ್ಮನವಿ ಪ್ರಾಧಿಕಾರದ ಮುಂದೆ ತರತಕ್ಕದ್ದು.

(11) ಮೇಲ್ಮನವಿ ಪ್ರಾಧಿಕಾರವು ನಿಯಮಿಸಬಹುದಾದಂಥ ವಿಧಾನದ ಅನುಸಾರವಾಗಿ ಮೇಲ್ಮನವಿಯನ್ನು ವಿಲೇ ಮಾಡತಕ್ಕದ್ದು.

**23. ಬಡ್ಡಿ ಮತ್ತು ದಂಡಗಳು.-** (1) ಯಾರೇ ಸಂಗ್ರಹಕಾರ ಅಥವಾ ವೇದಿಕೆಯು ನಿಯಮಿಸಬಹುದಾದ ಸಮಯದೊಳಗೆ 20ನೇ ಪ್ರಕರಣದಡಿ ಪಾವತಿಸಬೇಕಾದ ಯಾವುದೇ ಶುಲ್ಕದ ಮೊತ್ತವನ್ನು ಪಾವತಿಸಲು ತಪ್ಪಿದಲ್ಲಿ, ಪಾವತಿಸಬೇಕಾದ ಬಾಕಿ ಶುಲ್ಕದ ಮೇಲೆ ಅಂಥ ಪಾವತಿಯು ಬಾಕಿಯಿರುವ ದಿನಾಂಕದಿಂದ ಅಂಥ ಸಂಗ್ರಹಕಾರ ಅಥವಾ ವೇದಿಕೆಯು ವಾಸ್ತವವಾಗಿ ಪಾವತಿಮಾಡುವಂಥ ಮೊತ್ತದ ಮೇಲೆ ವಾರ್ಷಿಕವಾಗಿ ಶೇಕಡಾ ಹನ್ನೆರಡಷ್ಟರ ದರದಲ್ಲಿ ಸರಳ ಬಡ್ಡಿಯನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು.

(2) ಯಾರೇ ಸಂಗ್ರಹಕಾರ ಅಥವಾ ವೇದಿಕೆಯು ಈ ಅಧಿನಿಯಮ ಅಥವಾ ಅದರಡಿ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿದರೆ ಅಥವಾ ಅಧಿನಿಯಮದ ಅಥವಾ ಅದರಡಿ ರಚಿಸಿದ ಯಾವುದೇ ನಿಯಮಗಳ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ, ರಾಜ್ಯ ಸರ್ಕಾರವು, ಮೊದಲ ಉಲ್ಲಂಘನೆಗಾಗಿ ಐದು ಸಾವಿರ ರೂಪಾಯಿ ಮತ್ತು ತರುವಾಯದ ಉಲ್ಲಂಘನೆಗಳಿಗಾಗಿ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯನ್ನು ಸಂಗ್ರಹಕಾರ ಅಥವಾ ವೇದಿಕೆಗೆ ವಿಧಿಸಬಹುದು.

(3) ಅಧಿನಿಯಮ ಮತ್ತು ಅದರಡಿ ರಚಿಸಿದ ನಿಯಮಗಳ ಯಾವುದೇ ಇತರ ಅನನುಪಾಲನೆಗಾಗಿ ಸಂಗ್ರಹಕಾರರು ಅಥವಾ ವೇದಿಕೆಗಳೊಂದಿಗೆ ನಿಯಮಿಸಬಹುದಾದಂತೆ ವ್ಯವಹರಿಸತಕ್ಕದ್ದು.

(4) ಪಾವತಿ ಮಾಡದೇ ಇರುವ ಸಂದರ್ಭದಲ್ಲಿ, ನಿಯಮಿಸಬಹುದಾದಂತೆ ವಸೂಲು ಮಾಡತಕ್ಕದ್ದು.

(5) ಉಪಪ್ರಕರಣ (2)ರಡಿ ಜುಲ್ಮಾನೆಯನ್ನು ವಿಧಿಸುವ ಕಾರ್ಯವಿಧಾನವು ನಿಯಮಿಸಬಹುದಾದಂತಿರತಕ್ಕದ್ದು.

**24. ತ್ರೈಮಾಸಿಕ ವಿವರಪಟ್ಟಿಕೆಗಳ ಸಲ್ಲಿಕೆ.-** ನಿಯಮಿಸಬಹುದಾದಂಥ ನಮೂನೆಯಲ್ಲಿ ತ್ರೈಮಾಸಿಕ ವಿವರಪಟ್ಟಿಕೆಯನ್ನು ಸಂಗ್ರಹಕಾರರು ಅಥವಾ ವೇದಿಕೆಗಳು ಮಂಡಲಿಗೆ ವಿದ್ಯುನ್ಮಾನವಾಗಿ ಸಲ್ಲಿಸತಕ್ಕದ್ದು.

ಪರಂತು ಸರ್ಕಾರವು ವ್ಯವಹಾರ ಅಗತ್ಯಗಳನ್ನು ಸುಗಮಗೊಳಿಸುವ ಆಧಾರದ ಮೇಲೆ ಅಧಿಸೂಚನೆಯ ಮೂಲಕ ಅರ್ಧ ವಾರ್ಷಿಕವಾಗಿ ಅಥವಾ ವಾರ್ಷಿಕವಾಗಿ ವಿವರಪಟ್ಟಿಕೆ ಸಲ್ಲಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಬಹುದು.

**25. ವಾರ್ಷಿಕ ವರದಿ.-** (1) ಮಂಡಳಿಯು ಈ ಅಧಿನಿಯಮದಡಿ ಪ್ರತಿ ವರ್ಷ ತನ್ನ ಚಟುವಟಿಕೆಗಳ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಆ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದಡಿ ವರದಿಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿ ಸದನದ ಮುಂದೆ ಅದನ್ನು ಮಂಡಿಸತಕ್ಕದ್ದು.

**26. ಯಾವುದೇ ಇತರ ಕಾನೂನಿಗೆ ಅಧಿನಿಯಮವು ಹೆಚ್ಚುವರಿಯಾಗಿರುವುದು.-** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಜೊತೆಗೆ ಇರತಕ್ಕದ್ದೇ ಹೊರತು ಅಲ್ಪೀಕರಿಸತಕ್ಕದ್ದಲ್ಲ.

**27. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಪಾಲನೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**28. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪೂರ್ವಪ್ರಕಟಣೆಯ ತರುವಾಯ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಲಾದ ಅಧಿಕಾರಗಳ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ, ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಅಂಥ ನಿಯಮಗಳನ್ನು ಉಪಬಂಧಿಸಬಹುದು, ಎಂದರೆ:-

(i) 4ನೇ ಪ್ರಕರಣದ (7)ನೇ ಉಪಪ್ರಕರಣದಡಿ ಮಂಡಳಿಯ ನಾಮನಿರ್ದೇಶಿತ ಸದಸ್ಯರುಗಳಿಗಾಗಿ ಭತ್ಯೆಗಳ ದರಗಳು;

(ii) 5ನೇ ಪ್ರಕರಣದ (1)ನೇ ಉಪಪ್ರಕರಣದಡಿ ಅಗತ್ಯಪಡಿಸಲಾದಂತೆ ಮಂಡಳಿಯ ಸಭೆಗಳಿಗಾಗಿ ಸಮಯ, ಸ್ಥಳ ಮತ್ತು ಕಾರ್ಯವಿಧಾನ;

(iii) 9ನೇ ಪ್ರಕರಣದ (1)ನೇ ಉಪಪ್ರಕರಣದಡಿ ಜಮಾ ಖರ್ಚುಪಟ್ಟಿ ಮತ್ತು ಇತರೆ ಸಂಬಂಧಪಟ್ಟ ದಾಖಲೆಗಳನ್ನೊಳಗೊಂಡ ಸೂಕ್ತ ಲೆಕ್ಕಪತ್ರಗಳು, ಲೆಕ್ಕಪತ್ರಗಳ ವಾರ್ಷಿಕ ತಃಖ್ತೆಗಳನ್ನು ನಿರ್ವಹಿಸಬೇಕಾದ ವಿಧಾನ;

(iv) 9ನೇ ಪ್ರಕರಣದ (3)ನೇ ಉಪಪ್ರಕರಣದಡಿ ಮಂಡಳಿಯು ಲೆಕ್ಕಪರಿಶೋಧಿತ ವರದಿಯನ್ನು ಸಲ್ಲಿಸಬೇಕಾದ ದಿನಾಂಕ;

(v) 9ನೇ ಪ್ರಕರಣದ (6)ನೇ ಉಪಪ್ರಕರಣದಡಿ ನಿಧಿಯ ಹಣವನ್ನು ಇಡತಕ್ಕ ವಿಧಾನ;

(vi) 10ನೇ ಪ್ರಕರಣದ (1)ನೇ ಉಪಪ್ರಕರಣದಡಿ ಕಾರ್ಯನಿರ್ವಹಿಸುತ್ತಿರುವ ಅಥವಾ ನೋಂದಾಯಿಸಿದ ಗಿಗ್ ಕಾರ್ಮಿಕರ ದತ್ತಾಂಶಗಳನ್ನು ಒದಗಿಸುವ ವಿಧಾನ;

(vii) 10ನೇ ಪ್ರಕರಣದ (2)ನೇ ಉಪಪ್ರಕರಣದಡಿ ಗಿಗ್ ಕಾರ್ಮಿಕರ ಸಂಖ್ಯೆಯಲ್ಲಿನ ಯಾವುದೇ ಬದಲಾವಣೆಗಳನ್ನು ಇಂದೀಕರಿಸುವ ವಿಧಾನ;

(viii) 11ನೇ ಪ್ರಕರಣದ (1)ನೇ ಉಪಪ್ರಕರಣದನುಸಾರ ಮಂಡಳಿಯು ಸಂಗ್ರಹಕಾರರು ಅಥವಾ ವೇದಿಕೆಗಳನ್ನು ನೋಂದಾಯಿಸಿಕೊಳ್ಳುವ ವಿಧಾನ;

(ix) 11ನೇ ಪ್ರಕರಣದ (3)ನೇ ಉಪಪ್ರಕರಣದಡಿ ವೆಬ್ ಪೋರ್ಟಲ್ ನಲ್ಲಿ ಸಂಗ್ರಹಕಾರರು ಅಥವಾ ವೇದಿಕೆಗಳ ರಿಜಿಸ್ಟರ್ ಅನ್ನು ಪ್ರಕಟಿಸುವ ವಿಧಾನ;

(x) 13ನೇ ಪ್ರಕರಣದ (1)ನೇ ಉಪಪ್ರಕರಣದಡಿ ಸ್ವಯಂಚಾಲಿತ ಮೇಲ್ವಿಚಾರಣೆ ಮತ್ತು ತೀರ್ಮಾನ ಕೈಗೊಳ್ಳುವ ವ್ಯವಸ್ಥೆಗಳ ಕುರಿತ ಮಾಹಿತಿಯನ್ನು ಪಡೆಯುವ ಕಾರ್ಯವಿಧಾನ;

(xi) 14ನೇ ಪ್ರಕರಣದ (2)ನೇ ಉಪಪ್ರಕರಣದಡಿ ಗಿಗ್ ಕಾರ್ಮಿಕನು ತೀರ್ಮಾನದ ಮೇಲೆ ಅಪೀಲು ಮಾಡುವ ಹಕ್ಕಿನ ವಿಧಾನ;

(xii) 16ನೇ ಪ್ರಕರಣದ (2)ನೇ ಉಪಪ್ರಕರಣದಡಿ ವಲಯ ನಿರ್ದಿಷ್ಟ ವೃತ್ತಿಜನ್ಯ ಸುರಕ್ಷತೆ ಮತ್ತು ಆರೋಗ್ಯ ಗುಣಮಟ್ಟಗಳು;

(xiii) 17ನೇ ಪ್ರಕರಣದ (3)ನೇ ಉಪಪ್ರಕರಣದಡಿ ಬಹಿರಂಗಪಡಿಸಿದ ಹೊಣೆಗಾರಿಕೆಗಳನ್ನು ಪ್ರಕಟಿಸುವ ವಿಧಾನ;

(xiv) 19ನೇ ಪ್ರಕರಣದ (1)ನೇ ಉಪಪ್ರಕರಣದ (v)ನೇ ಖಂಡದಡಿ ಯಾವುದೇ ಇತರ ಮೂಲಗಳಿಂದ ಸ್ವೀಕರಿಸಲಾದ ಮೊತ್ತಗಳು;

(xv) 19ನೇ ಪ್ರಕರಣದ (2)ನೇ ಉಪಪ್ರಕರಣದಡಿ ನಿಧಿಯ ಬಳಕೆ ಮತ್ತು ನಿರ್ವಹಣೆಯ ವಿಧಾನ.

(xvi) 20ನೇ ಪ್ರಕರಣದ (3)ನೇ ಉಪಪ್ರಕರಣದಡಿ ಗಿಗ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಶುಲ್ಕವನ್ನು ಸಂಗ್ರಹಿಸುವ ವಿಧಾನ;

(xvii) 20ನೇ ಪ್ರಕರಣದ (4)ನೇ ಉಪಪ್ರಕರಣದಡಿ ಪ್ರತಿ ತ್ರೈಮಾಸಿಕದ ಕೊನೆಯಲ್ಲಿ ಸಂಗ್ರಹಕಾರ ಅಥವಾ ವೇದಿಕೆಯು ಕ್ಷೇಮಾಭಿವೃದ್ಧಿ ಶುಲ್ಕವನ್ನು ಠೇವಣಿಯಿರಿಸುವ ವಿಧಾನ;

(xviii) 20ನೇ ಪ್ರಕರಣದ (5)ನೇ ಉಪಪ್ರಕರಣದಡಿ ಕ್ಷೇಮಾಭಿವೃದ್ಧಿ ಶುಲ್ಕದ ಮರುಹೊಂದಾಣಿಕೆಯ ವಿಧಾನ;

(xix) 21ನೇ ಪ್ರಕರಣದ (2)ನೇ ಉಪಪ್ರಕರಣದಡಿ ಪ್ರತಿಯೊಂದು ವಹಿವಾಟಿಗಾಗಿ ವೇದಿಕೆ ಆಧಾರಿತ ಗಿಗ್ ಕಾರ್ಮಿಕರಿಗೆ ಮಾಡಲಾದ ಸಂದಾಯ ಮತ್ತು ಕಟಾವಣೆ ಮಾಡಲಾದ ಶುಲ್ಕವನ್ನು ಸಂದಾಯ ಮತ್ತು ಕ್ಷೇಮಾಭಿವೃದ್ಧಿ ಶುಲ್ಕ ಪರಿಶೀಲನಾ ವ್ಯವಸ್ಥೆಯಲ್ಲಿ (PWFVS) ದಾಖಲಿಸುವ ವಿಧಾನ;

(xx) 22ನೇ ಪ್ರಕರಣದ (2)ನೇ ಉಪಪ್ರಕರಣದಡಿ ಆಂತರಿಕ ವಿವಾದ ಪರಿಹಾರ ಸಮಿತಿಯ ಸಂರಚನೆ ಮತ್ತು ಕಾರ್ಯವಿಧಾನದ ರೀತಿ;

(xxi) 22ನೇ ಪ್ರಕರಣದ (3)ನೇ ಉಪಪ್ರಕರಣದಡಿ ಅರ್ಜಿಯನ್ನು ವಿಲೇವಾರಿಗೊಳಿಸುವ ವಿಧಾನ;

(xxii) 22ನೇ ಪ್ರಕರಣದ (8)ನೇ ಉಪಪ್ರಕರಣದಡಿ ಅರ್ಜಿಯನ್ನು ವಿಲೇವಾರಿಗೊಳಿಸುವ ವಿಧಾನ;

(xxiii) 22ನೇ ಪ್ರಕರಣದ (11)ನೇ ಉಪಪ್ರಕರಣದಡಿ ಅಪೀಲನ್ನು ವಿಲೇವಾರಿಗೊಳಿಸುವ ವಿಧಾನ;

(xxiv) 23ನೇ ಪ್ರಕರಣದ (1)ನೇ ಉಪಪ್ರಕರಣದಡಿಯಲ್ಲಿನ ಕಾಲಮಿತಿ.

(xxv) 23ನೇ ಪ್ರಕರಣದ (3)ನೇ ಉಪಪ್ರಕರಣದಡಿ ಅನನುಪಾಲನೆಗಾಗಿ ವ್ಯವಹರಿಸಬೇಕಾದ ವಿಧಾನ;

(xxvi) 23ನೇ ಪ್ರಕರಣದ (4)ನೇ ಉಪಪ್ರಕರಣದಡಿ ಪಾವತಿ ಮಾಡದೇ ಇದ್ದ ಸಂದರ್ಭದಲ್ಲಿ ಜುಲ್ಮಾನೆಯನ್ನು ವಸೂಲು ಮಾಡುವ ವಿಧಾನ;

(xxvii) 23ನೇ ಪ್ರಕರಣದ (5)ನೇ ಉಪಪ್ರಕರಣದಡಿ ಜುಲ್ಮಾನೆಯನ್ನು ವಿಧಿಸುವ ವಿಧಾನ. ಮತ್ತು

(xxviii) 24ನೇ ಪ್ರಕರಣದಡಿ ಸಂಗ್ರಹಕಾರ ಅಥವಾ ವೇದಿಕೆಯು ತ್ರೈಮಾಸಿಕ ವಿವರಪಟ್ಟಿಕೆಯನ್ನು ಸಲ್ಲಿಸುವ ವಿಧಾನ;

(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟುಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಅದರಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯಕ್ಕೆ ಬಾಧಕವಾಗತಕ್ಕದ್ದಲ್ಲ.

**29. ವಿನಿಯಮಗಳ ರಚನಾಧಿಕಾರ.-** ಈ ಅಧಿನಿಯಮದ ಅಡಿಯಲ್ಲಿ ಈ ಮುಂದಿನ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಕ್ಷೇಮಾಭಿವೃದ್ಧಿ ಮಂಡಳಿಯು ವಿನಿಯಮಗಳನ್ನು ರಚಿಸಬಹುದು,-

(i) 11ನೇ ಪ್ರಕರಣದ (1)ನೇ ಉಪಪ್ರಕರಣದ ಅನುಸಾರ ಸಂಗ್ರಹಕಾರರ ಅಥವಾ ವೇದಿಕೆಗಳ ನೋಂದಣಿ ವಿಧಾನ;

(ii) 10ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಸಂಗ್ರಹಕಾರರು ಅಥವಾ ವೇದಿಕೆಗಳು ಎಲ್ಲಾ ವೇದಿಕೆಗಳಲ್ಲಿ ಕಾರ್ಯನಿರ್ವಹಿಸುವ ಮತ್ತು ನೋಂದಾಯಿಸಿಕೊಂಡ ಎಲ್ಲಾ ಗಿಗ್ ಕಾರ್ಮಿಕರ ದತ್ತಾಂಶವನ್ನು ಒದಗಿಸುವ ವಿಧಾನ; ಮತ್ತು

(iii) 10ನೇ ಪ್ರಕರಣದ (3)ನೇ ಉಪಪ್ರಕರಣದ ಅನುಸಾರ ಸಂಗ್ರಹಕಾರರು ಅಥವಾ ವೇದಿಕೆಗಳು ಎಲ್ಲಾ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ ಇತ್ತೀಚಿನ ದತ್ತಾಂಶವನ್ನು ಸಂಗ್ರಹಕಾರರು ಅಥವಾ ವೇದಿಕೆಗಳು ಹಂಚಿಕೊಳ್ಳಬೇಕಾದ ವಿಧಾನ.

**30. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳಿಗೆ ಪರಿಣಾಮ ನೀಡುವಲ್ಲಿ ಏನಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲ ಸದನಗಳ ಮುಂದೆ ಮಂಡಿಸತಕ್ಕದ್ದು.

**31. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ.-** ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸುವ ಮೂಲಕ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನಮೂದುಗಳನ್ನು ಸೇರಿಸಬಹುದು, ಮಾರ್ಪಡಿಸಬಹುದು ಅಥವಾ ಬಿಟ್ಟುಬಿಡಬಹುದು.

**32. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ವೇದಿಕೆ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ) ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ ಸಂ. 04)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು, ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

**ಅನುಸೂಚಿ**

**(1ನೇ ಪ್ರಕರಣದ (3)ನೇ ಉಪಪ್ರಕರಣದ (i) ಖಂಡವನ್ನು ನೋಡಿ)**

**ಸಂಗ್ರಹಕಾರ ಅಥವಾ ವೇದಿಕೆಯು ಒದಗಿಸುವ ಸೇವೆಗಳು**

1. ಪ್ರಯಾಣ ಹಂಚಿಕೆ ಸೇವೆಗಳು.

2. ಆಹಾರ ಮತ್ತು ದಿನಸಿ ತಲುಪಿಸುವ ಸೇವೆಗಳು.

3. ಸರಕು ಸಾಗಣಿಕೆ (ಲಾಜಿಸ್ಟಿಕ್) ಸೇವೆಗಳು.

4. ಸರಕುಗಳು ಅಥವಾ ಸೇವೆಗಳ ಸಗಟು/ಚಿಲ್ಲರೆ ಮಾರಾಟಕ್ಕಾಗಿ ಇ-ಮಾರುಕಟ್ಟೆ ಸ್ಥಳ (ಮಾರುಕಟ್ಟೆ ಮತ್ತು ದಾಸ್ತಾನು ಮಾದರಿ ಎರಡೂ) ಮತ್ತು/ಅಥವಾ ವ್ಯಾಪಾರದಿಂದ ವ್ಯವಹಾರಕ್ಕೆ/ವ್ಯಾಪಾರದಿಂದ ಗ್ರಾಹಕರಿಗೆ (ಬಿ2ಬಿ/ಬಿ2ಸಿ).

5. ವೃತ್ತಿಪರ ಸೇವೆಗಳನ್ನು ಒದಗಿಸುವವರು.

6. ಆರೋಗ್ಯ ಸೇವೆಗಳು.

7. ಪ್ರಯಾಣ ಮತ್ತು ಆತಿಥ್ಯ ಸೇವೆಗಳು.

8. ವಿಷಯ ಮತ್ತು ಮಾಧ್ಯಮ ಸೇವೆಗಳು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.